CREATIVE
EDUCATION FOUNDATION MOODBIDRI (R)

# ಕ್ರಿಯೇಟಿವ್ ನಿನಾದ

ಜೂನ್ - ಆಗಸ್ಟ್ 2023

ತ್ರೈಮಾಸಿಕ ಪತ್ರಿಕೆ | ಕ್ರಿಯಾಶೀಲ ಮನಸ್ಸುಗಳಿಗಾಗಿ... | ಸಂಪುಟ 2 ಸಂಚಿಕೆ 5

## ಸ|ರಿ|ಗ|ಮ|ಪ|ದ|ನಿ

ಏಳು ಬಣ್ಣಗಳು ಸೇರಿ ಮನಸೆಳೆಯುವ ಕಾಮನಬಿಲ್ಲು ಮೂಡಿದಂತೆ ಏಳು ಕ್ರಿಯಾಶೀಲ ಮನಸ್ಸುಗಳು ಸೇರಿ ಶಿಕ್ಷಣ ಕ್ಷೇತ್ರದ ಹೊಸ ವಿನ್ಯಾಸದ ಚಿತ್ತಾರ ಮೂಡಿಸುವ ಪ್ರಯತ್ನ ಸಾಗುತ್ತಿದೆ.

ಶಿಕ್ಷಣ ಕ್ಷೇತ್ರದ ಎಲ್ಲಾ ಮಜಲುಗಳಲ್ಲೂ ವಿಭಿನ್ನತೆಯ ಪ್ರಯೋಗದೊಂದಿಗೆ ಗುಣಾತ್ಮಕ ಶಿಕ್ಷಣದ ಧ್ಯೇಯ ನಮ್ಮದು. ಇದರಂತೆಯೇ ನವಯುಗದವರು ನಮ್ಮ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಆರಾಧಿಸುವ ಜೊತೆ ಅದರ ಸಂಪೂರ್ಣ ಅರಿವು ಪಡೆಯಬೇಕೆಂಬುದು ಸಪ್ತ ಮನಸ್ಸುಗಳ ಆಶಯ.

ಈಗಿನ ಯುವ ಸಮುದಾಯ ಸಾಮಾಜಿಕ ಜಾಲತಾಣದಲ್ಲೆ ತನ್ಮಯರಾಗಿ, ಪುಸ್ತಕ ಓದುವ ಹವ್ಯಾಸ ಕ್ಷೀಣಿಸಿದೆ ಎಂಬುದು ಹಲವರ ವಾದ. ಇದಕ್ಕೆ ವ್ಯತಿರಿಕ್ತ ಎಂಬಂತೇ ಈ ತಲೆಮಾರಿನಲ್ಲೂ ಓದುವ ಉತ್ಸುಕರು ಅನೇಕರು ಇದ್ದಾರೆ, ಪ್ರತಿಭಾವಂತ ಬರಹಗಾರರಿದ್ದಾರೆಂದು ಸಮಾಜಕ್ಕೆ ಉತ್ತರಿಸುವ ಜೊತೆಗೆ ಎಲ್ಲರನ್ನು ಸಾಹಿತ್ಯ ಪ್ರೇಮಿಗಳನ್ನಾಗಿಸುವ ಮೂಲಕ ಪ್ರಬುದ್ಧ ಸಮಾಜ ನಿರ್ಮಾಣದ ಕನಸಿನೊಂದಿಗೆ ಕಾರ್ಕಳದಲ್ಲಿ ವಿಭಿನ್ನ ಶೈಲಿಯ 'ಪುಸ್ತಕ ಮನೆ'ಯನ್ನು ನಿರ್ಮಿಸುತ್ತಿದ್ದೇವೆ. ಪುಸ್ತಕದ ಮನೆಯಲ್ಲಿ ಮಸ್ತಕ ತುಂಬಿಸುವ ಮನಗಳು ತಮದಾಗಲಿ...



**ಸಂಸ್ಥಾಪಕರು**
**ಕ್ರಿಯೇಟಿವ್ ಶಿಕ್ಷಣ ಸಂಸ್ಥೆಗಳು ಕಾರ್ಕಳ, ಉಡುಪಿ ಜಿಲ್ಲೆ**

## ಹಿರಿಯರ ತ್ಯಾಗ ಬಲಿದಾನವನ್ನು ಸಾರ್ಥಕ ಪಡಿಸೋಣ

- ಎಮ್ ಕೆ ವಿಜಯಕುಮಾರ್

**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

ನಮ್ಮ ದೇಶಕ್ಕೆ ಹಿರಿಯರ ನಿಃಸ್ವಾರ್ಥ, ತ್ಯಾಗ, ದೇಶಪ್ರೇಮದ ಪರಾಕಾಷ್ಠೆಯ ಪರಿಣಾಮ ಇಂದು ಸ್ವತಂತ್ರ ಭಾರತದಲ್ಲಿ ನಾವು ಜೀವಿಸುತ್ತಿದ್ದೇವೆ. ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆಯಲು ನಮ್ಮ ಪೂರ್ವಜರು ಭಾರತವೆಂಬುದು ಶ್ರೇಷ್ಠ ಭಾರತವಾಗಬೇಕೆಂದು ಬಲಿದಾನಗೈದರು. ಇಂತಹ ಅಮೃತಕಾಲವನ್ನು ನಾವು ಸಂಪತ್ತಿನಂತೆ ಕಾಪಾಡಿ ಕೊಳ್ಳಬೇಕು ಎಂದು ಕಾರ್ಕಳದ ಖ್ಯಾತ ನ್ಯಾಯವಾದಿ ಶ್ರೀ ಎಂ ಕೆ ವಿಜಯಕುಮಾರ್ ಕರೆ ನೀಡಿದರು.

ಈ ಶುಭಾವಸರದಲ್ಲಿ ಅಂಡಮಾನ್‌ನಲ್ಲಿ ನಡೆದ ಯೋಗಾಸನ ಸ್ಪರ್ಧೆಯಲ್ಲಿ ರಾಷ್ಟ್ರವನ್ನು ಪ್ರತಿನಿಧಿಸಿ ಸಂಸ್ಥೆಗೂ ಗೌರವ ತಂದ ಕ್ರಿಯೇಟಿವ್ ಕಾಲೇಜಿನ ಹಳೆ ವಿದ್ಯಾರ್ಥಿನಿ ನಿಧಿ ಯು. ಆಚಾರ್ ಅವರನ್ನು ಸಂಸ್ಥೆಯ ವತಿಯಿಂದ ಹೆಮ್ಮೆಯಿಂದ ಸನ್ಮಾನಿಸಲಾಯಿತು.

ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್, ಸಂಸ್ಥಾಪಕರಾದ ಅಶ್ವತ್ ಎಸ್.ಎಲ್., ಆದರ್ಶ ಎಮ್.ಕೆ., ಅಮೃತ್ ರೈ, ಗಣಪತಿ ಭಟ್ ಕೆ.ಎಸ್., ಉಪನ್ಯಾಸಕ ವರ್ಗ ಹಾಗೂ ಉಪನ್ಯಾಸಕೇತರ ವರ್ಗದವರು ಉಪಸ್ಥಿತರಿದ್ದರು. ಆಂಗ್ಲ ಭಾಷಾ ಉಪನ್ಯಾಸಕ ರಾಜೇಶ್ ಶೆಟ್ಟಿ ನಿರೂಪಿಸಿ ವಂದಿಸಿದರು.




## ದೇಶದ ಐಕ್ಯತೆ, ಭದ್ರತೆಯ ಜೊತೆ ಸ್ವಚ್ಛತೆಯು ರಾಷ್ಟ್ರದ ಏಳಿಗೆಗೆ ಪೂರಕ

- ಶ್ರೀ ಕೃಷ್ಣ ದೇವಾಡಿಗ

**(ಕ್ರಿಯೇಟಿವ್ ಮೀಡಿಯಾ : ಉಡುಪಿ)**



ದೇಶದ ಐಕ್ಯತೆ, ಭದ್ರತೆಯ ಜೊತೆಗೆ ಸ್ವಚ್ಛ ಭಾರತದ ಪರಿಕಲ್ಪನೆಯು ರಾಷ್ಟ್ರದ ಏಳಿಗೆಗೆ ಪೂರಕವಾಗಿದ್ದು, ಆ ನಿಟ್ಟಿನಲ್ಲಿ ನಾವೆಲ್ಲರೂ ಶ್ರದ್ಧಾಪೂರ್ವಕವಾಗಿ ಕಾರ್ಯೋನ್ಮುಖರಾಗಬೇಕು"ಎಂದು ಕಲ್ಯಾಣಪುರ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಕೃಷ್ಣ ದೇವಾಡಿಗರವರು ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ (ರಿ)ಕಾರ್ಕಳ. ಇದರ ಆಡಳಿತಕೊಳಪಟ್ಟ ತ್ರಿಶಾ ಪದವಿಪೂರ್ವ ಕಾಲೇಜು ಕಲ್ಯಾಣಪುರದಲ್ಲಿ ಧ್ವಜಾರೋಹಣಗೈಯುತ್ತ ವಿದ್ಯಾರ್ಥಿಗಳನ್ನು ಕುರಿತು ಮಾತುಗಳನ್ನಾಡಿದರು.

ಧ್ವಜಾರೋಹಣ ಕಾರ್ಯಕ್ರಮದಲ್ಲಿ ನಿವೃತ್ತ ಸೇನಾನಿ ಪವನಾಂಜಯ ಎನ್. ಸಂಸ್ಥೆಯ ಸಂಸ್ಥಾಪಕರಲ್ಲಿ ಓರ್ವರಾದ ಡಾ. ಗಣನಾಥ ಶೆಟ್ಟಿ , ಪ್ರಾಂಶುಪಾಲರದ ಸ್ಟ್ಯಾನಿ ಲೋಬೋ, ಉಪನ್ಯಾಸಕ ವರ್ಗ, ವಿದ್ಯಾರ್ಥಿವೃಂದ ಹಾಗೂ ಬೋಧಕೇತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## 'ಕೆಸಡ್ರೊಂಜಿ ದಿನ'

### ಮಣ್ಣಿನೊಂದಿಗೆ ಕಲಿಕಾ ಅನುಭವ




ಕಾರ್ಕಳ: ಹಿರ್ಗಾನ ಗ್ರಾಮದಲ್ಲಿರುವ 'ಬೆಂಗಾಲ್' ಕೃಷಿ ಭೂಮಿಯಲ್ಲಿ ಕ್ರಿಯೇಟಿವ್ ಪಿ.ಯು ಕಾಲೇಜಿನ ವಾಣಿಜ್ಯ ವಿದ್ಯಾರ್ಥಿಗಳಿಗೆ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಸ್ತುಗಳ ಪ್ರದರ್ಶನದೊಂದಿಗೆ ಕೆಸರಿನಲ್ಲಿ ಜೀವನದ ಕಲಿಕೆ ಮತ್ತು ವಿವಿಧ ಆಟೋಟ ಕಾರ್ಯಕ್ರಮಗಳು ನಡೆದವು.

ಕೆಸಡ್ರೊಂಜಿ ದಿನ ಕಾರ್ಯಕ್ರಮವನ್ನು ನೇಜಿ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಹಿರ್ಗಾನ ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರಾದ ಸಂತೋಷ್ ಶೆಟ್ಟಿಯವರು ಇಂದು ನಮಗೆ ಧನ ಸಂಪಾದನೆಗೆ ಅನೇಕ ಮಾರ್ಗಗಳಿವೆ. ಆದರೆ ಹೊಟ್ಟೆ ತುಂಬಿಸಲು ರೈತ ಬೆಳೆದ ಬೆಳೆಯೇ ಬೇಕಾಗುತ್ತದೆ. ಆಹಾರದ ಉತ್ಪಾದನೆ ಇಲ್ಲದೇ ಹೋದರೆ ಎಷ್ಟೇ ಹಣವಿದ್ದರೂ ಬದುಕಲು ಅಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಕೃಷಿಯನ್ನು ಭೂಮಿತಾಯಿಯ ಸೇವೆ ಎಂದು ಭಾವಿಸಿ ಹಾಳು ಬಿದ್ದಿರುವ ಕೃಷಿ ಜಮೀನಿನಲ್ಲಿ ಬೆಳೆ ಬೆಳೆಯುವಂತೆ ಮಾಡಲಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಡಾ. ಗಣನಾಥ ಶೆಟ್ಟಿ ಮಾತನಾಡಿ ಒಬ್ಬ ಕೃಷಿಕ ಪಡುವ ಕಷ್ಟ, ಬೆಳೆ ಬೆಳೆದು ರೈತನ ಕೈ ಸೇರಬೇಕಾದರೆ ತುಂಬಾ ದಿನಗಳು ಬೇಕಾಗುತ್ತದೆ. ಆಧುನಿಕತೆಯ ಭರಾಟೆಯ ಮಧ್ಯೆ ನಾವು ನಮ್ಮ ಮೂಲ ಕಸುಬಾದ ಕೃಷಿ, ಉಳುಮೆಯನ್ನೇ ಮರೆಯುತ್ತಿದ್ದೇವೆ. ಮುಂದೊಂದು ದಿನ ಆಹಾರದ ಕೊರತೆ ಉಂಟಾಗುವ ಸಂದರ್ಭ ಎದುರಾಗಬಹುದು ಅದಕ್ಕಾಗಿ ನಾವು ಎಚ್ಚೆತ್ತು ಕೊಳ್ಳಬೇಕಾಗಿದೆ ಎಂದು ಹೇಳಿದರು.

## ಹೆಚ್. ಕೆ. ಎಸ್ ಕಾಲೇಜಿನಲ್ಲಿ ವೈಭವದ ಸ್ವಾತಂತ್ರ್ಯ ಮಹೋತ್ಸವ ಆಚರಣೆ



**(ಕ್ರಿಯೇಟಿವ್ ಮೀಡಿಯಾ : ಹಾಸನ)**

ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಕಾರ್ಕಳದ ಶೈಕ್ಷಣಿಕ ಸಹಭಾಗಿತ್ವದಲ್ಲಿ ಕಾರ್ಯಾಚರಿಸುತ್ತಿರುವ ಜಿಲ್ಲೆಯ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ಹೆಚ್.ಕೆ.ಎಸ್ ಪಿ.ಯು ಕಾಲೇಜಿನಲ್ಲಿ 77ನೇ ಸ್ವಾಂತಂತ್ರ್ಯ ಸಮಾರಂಭವನ್ನು ವೈಭವದಿಂದ ಆಚರಿಸಲಾಯಿತು. ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದ, ಬೇಲೂರು ವಿಧಾನ ಸಭಾ ಕ್ಷೇತ್ರದ ಶಾಸಕರು ಹಾಗೂ ಹೆಚ್ ಕೆ ಎಸ್ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್.ಕೆ ಸುರೇಶ್ ಅವರು ಮಾತನಾಡುತ್ತಾ ಮುಂಬರುವ ಜನತೆಗೆ ಸ್ವಾತಂತ್ರ್ಯವನ್ನು ಬಿತ್ತುವಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಮಹತ್ವವನ್ನು ತಿಳಿಹೇಳಿದರು, ತದನಂತರ ವಿಶೇಷ ಉಪನ್ಯಾಸ ಕಾರ್ಯಕ್ರಮ ಜರಗಿತು. ಉಪನ್ಯಾಸ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀ ಪ್ರೇಮಾನಂದ ಶೆಟ್ಟಿ ಕುಂದಾಪುರ ಅವರು ಸ್ವತಂತ್ರತೆ ಗಳಿಸುವಲ್ಲಿ ನಮ್ಮ ಹಿರಿಯರ ಬಲಿದಾನಗಳ ಕುರಿತು ಮತ್ತು ನಡೆದ ಹೋರಾಟದ ಕುರಿತು ಬೆಳಕು ಚೆಲ್ಲಿದರು. ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ನಡೆದ ಖೇಲೋ ಹೆಚ್. ಕೆ.ಎಸ್ ಆಟೋಟ ಸ್ಪರ್ಧೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವಿಮಲ್ ರಾಜ್. ಜಿ ಅವರು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಹೆಚ್. ಕೆ.ಎಸ್ ಇಂಟರ್ನ್ಯಾಷನಲ್ ಸ್ಕೂಲ್‌ನ ಪ್ರಾಂಶುಪಾಲರಾದ ಡಾ. ಶಿವಕುಮಾರ್, ಹೆಚ್ .ಕೆ.ಎಸ್ ಪಿ.ಯು ಕಾಲೇಜ್‌ನ ಉಪಪ್ರಾಂಶುಪಾಲರು ಗಳಾದ ಶ್ರೀ ಪ್ರವೀಣ್.ಎ ಮತ್ತು ಶ್ರೀ ಆದಿತ್ಯ ವಟಿ.ಕೆ, ಉಪನ್ಯಾಸಕವರ್ಗ, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕ್ರಿಯೇಟಿವ್ ಪುಸ್ತಕ ಮನೆ, ಕಾರ್ಕಳ
ಪುಟಗಳೊಂದಿಗೆ ಪಯಣ...
+91 96064 74289
www.pustakamane.com

## ಕ್ರಿಯೇಟಿವ್ ನಿನಾದ

ಪ್ರಕಟಣೆ
ಕ್ರಿಯೇಟಿವ್ ಎಜುಕೇಶನ್ ಫೌಂಡೇಶನ್ ಮೂಡುಬಿದಿರೆ(ರಿ.)
ಕಾರ್ಕಳ, ಹಾಸನ, ಉಡುಪಿ

ಪ್ರತಿಗಳಿಗಾಗಿ : +919019844492
ಇ-ಮೇಲ್: ninada@creativeedu.in

ಕ್ರಿಯೇಟಿವ್ ನಿನಾದ ಬಳಗ

**ಗೌರವ ಸಂಪಾದಕರು**
ವಿದ್ವಾನ್ ಗಣಪತಿ ಭಟ್
ಡಾ. ಗಣನಾಥ ಶೆಟ್ಟಿ
ಅಮೃತ್ ರೈ
ಆದರ್ಶ ಎಂ.ಕೆ
ವಿಮಲ್ ರಾಜ್ ಜಿ.
ಗಣಪತಿ ಕೆ.ಎಸ್

**ಪ್ರಧಾನ ಸಂಪಾದಕರು**
ಅಶ್ವತ್ ಎಸ್.ಎಲ್.

**ಸಂಪಾದಕರು**
ರಾಘವೇಂದ್ರ ಬಿ.ರಾವ್ (ಅನು ಬೆಳ್ಳೆ)
ರಾಜೇಶ್ ಶೆಟ್ಟಿ

**ಸಲಹಾ ಮಂಡಳಿ**
ಕಾರ್ಕಳ ● ರಾಮಕೃಷ್ಣ ಹೆಗಡೆ, ಶಿವಕುಮಾರ್, ವಿನಾಯಕ ಜೋಗ್, ಮಹೇಶ್ ಶೆಣೈ, ಉಮೇಶ್ ಕೆ., ಆಶನ್ ಗೌಡ, ಪ್ರೇರಣಾ ನರೇಶ್ ಬಿ.ಆರ್
ಹಾಸನ ● ಮಹೇಶ್, ಸತೀಶ್ ಆಚಾರ್ಯ, ರಮೇಶ್, ವಿಘ್ನೇಶ್ ಕಾಮತ್
ಉಡುಪಿ ● ಸ್ಟ್ಯಾನಿ ಲೋಬೋ, ಸಂತೋಷ್


## ಸಂಪಾದಕೀಯ...

### ಬಡನೂರ ವರುಷಾನ ಹರುಷಾದಿ ಕಳೆಯೋಣ...

ನೇಗಿಲ ಹಿಡಿದು ತನ್ನದೇ ಹೊಲದಲ್ಲಿ ಉಳುಮೆ ಮಾಡಿ ಹಸಿವ ನೀಗಿಸಲು ಬೇಕಾದ ಧಾನ್ಯವನೆಲ್ಲಾ ಬೆಳೆದು, ಶ್ರೀಮಂತಿಕೆಯ ಯಾವ ಲೋಭವೂ ಇಲ್ಲದೆ ನೆಮ್ಮದಿಯ ಬದುಕು ಸಾಗಿಸುವ ಕಾಲವೊಂದಿತ್ತು. ಸಮಯ ಸರಿದ ಹಾಗೇ ಮನುಷ್ಯ ನಗರ ಜೀವನದ ಮೋಹಕ್ಕೆ ಒಳಗಾಗಿ ಕೃಷಿಕರ ಸಂಖ್ಯೆ ಕ್ಷೀಣಿಸುತ್ತಾ ಬಂತು. ಚಿಕ್ಕ ಉದ್ಯೋಗವಾದರೂ ನಗರವೇ ಬೇಕು ಎಂಬ ಹಪಹಪಿ ತೀವ್ರವಾಗಿ ನಗರದೆಡೆಗೆ ತೆರಳುವವರು ಅಧಿಕವಾಗಿ ಹಳ್ಳಿಯ ಚಿತ್ರಣ ಬದಲಾಯಿತು. ಅದೆಷ್ಟು ಬೇಗ ಕಾಲಚಕ್ರ ತಿರುಗುವುದು ನೋಡಿ, ಈಗ ನಗರ ಜೀವನ ತೀರಾ ಯಾಂತ್ರಿಕವಾದದ್ದು, ಬಿಡುವೇ ಇಲ್ಲದ ದುಡಿಮೆ, ಬೇಕಾದಷ್ಟು ಕಾಸಿದ್ದರೂ ನೆಮ್ಮದಿ ಇಲ್ಲ, ಸದಾ ಒತ್ತಡ ಎಂಬ ಭಾವ ನಗರವಾಸಿಗಳದ್ದು. ಹಾಗಾಗಿ 'ವೀಕೆಂಡ್ ವಿಶ್ರಾಂತಿ' ಬೇಕೆಂದು ಮತ್ತೆ ಹಳ್ಳಿ ಕಡೆ ತೆರಳುವುದು ಗಮನಿಸುತ್ತಿದ್ದೇವೆ. ಇಂತದೊಂದು ಅನುಭವದ ಜ್ಞಾನ ವಿದ್ಯಾರ್ಥಿಗಳಿಗಿರಬೇಕೆಂದು ನಾವು "**ಕೆಸರಿನಲ್ಲಿ ಒಂದು ದಿನ**" ಕಾರ್ಯಕ್ರಮ ಆಯೋಜಿಸಿದ್ದೇವು. ವಾಣಿಜ್ಯ ವಿದ್ಯಾರ್ಥಿಗಳಿಗೆ ಸಂಪೂರ್ಣ ಕೃಷಿ ಅನುಭವದ ಪಾಠವದು. ಉಳುಮೆಯಿಂದ ಹಿಡಿದು ಸಸಿ ನೆಡುವವರೆಗೆ, ಕೃಷಿ ಜೀವನದ ಸ್ವಾರಸ್ಯದ ಬಗೆ, ಕೃಷಿಕರ ಬದ್ಧತೆಯ ಕಾಯಕದ ಬಗೆ, ದಣಿವರಿಯದ ಶ್ರಮದ ನಡುವೆ ಸುಖ ಜೀವನ ನಡೆಸುವ ಬಗೆ ಸಂಪೂರ್ಣ ಅನುಭವ ನೀಡುವ ಕಾರ್ಯಾಗಾರವದು.

ಅದೆಲ್ಲೇ ಎಂತದ್ದೇ ಉದ್ಯೋಗವಿದ್ದರೂ ಅದೆಷ್ಟೇ ಧನಿಕನಾಗಿದ್ದರೂ, ಸಕಲ ಸಂಪತ್ತಿನ ವಿರಾಜಮಾನ ಒಡೆಯನಾಗಿದ್ದರೂ ಜೀವ ಉಸಿರಾಡಲು ಅಗತ್ಯವಾದ ಹೊಟ್ಟೆಯ ಕೂಳು ಈ ಕೆಸರಿನೊಂದಿಗೆ ಶ್ರಮಿಸುವ ಕೃಷಿಯಿಂದಲೇ ಬರಬೇಕು. ಹಾಗಾಗಿ ಕೃಷಿಯ ಬಗೆಗಿನ ಒಲವು ಅದರೊಂದಿಗಿನ ಒಡನಾಟ ನಮ್ಮನ್ನು ಇನ್ನಷ್ಟು ಚೆಲುವಾಗಿಸೀತು, ಗೆಲುವಾಗಿಸೀತು. ಈ ಹಸಿರ ಸಿರಿಯ ಒಡನಾಟ ನಮ್ಮೆಲ್ಲಾ ಒತ್ತಡವನ್ನು ತಂಪಾಗಿಸಿ ನಗುತ ಬಾಳುವುದನ್ನು ಬೆಸೆಯುವುದು. ಜೀವನದ ಗುರಿ, ಮೋಹ, ಹೋರಾಟವೇನೇ ಇದ್ದರೂ ನಮ್ಮ ದಿನನಿತ್ಯದ ಜೀವಾಮೃತ ನೀಡುವ ಕೃಷಿಯೊಡಗಿನ ಆದರ, ಸದಾ ಜಂಜಾಟದ ಗುಂಗಿನಲ್ಲಿರುವ ನಮಗಳಿಗೆ ಅತೀವ ಹರುಷ ನೀಡುವುದು. ಹಸಿರ ಗದ್ದೆಗಳು, ಪ್ರಗತಿಯ ನವ ಚೈತನ್ಯ ನೀಡುವುದು, ಬಾಗಿನಂತ ಬಂಗಾರದ ತೆನೆಗಳು ಸೌಂದರ್ಯದ ಭವ್ಯತೆಯ ರಸಾನುಭಾವ ನೀಡುವವು, ಬಿಸಿಲ ಝಳಪಕ್ಕೆ ಪಳಪಳನೆ ಹೊಳೆಯುವ ಹರಿವ ನೀರ ತೊರೆ ಕ್ರಿಯಾಶೀಲ ಚಲನೆಯ ಸ್ಫೂರ್ತಿ ನೀಡುವುದು.

ಬೇಂದ್ರೆಯ ಸಾಲಿನಂತೆ

"ಹುಸಿ ನಗುತ ಬಂದೇವ ನಸುನಗುತ ಬಾಳೋಣ ತುಸುನಗುತ ತೆರಳೋಣ ಬಡನೂರ ವರುಷಾನ ಹರುಷಾದಿ ಕಳೆಯೋಣ..."



**ಅಶ್ವತ್ ಎಸ್.ಎಲ್.**
**ಪ್ರಧಾನ ಸಂಪಾದಕರು,**
ಕ್ರಿಯೇಟಿವ್ ನಿನಾದ, ಕಾರ್ಕಳ

## ಎ.ಎಂ.ಇ ಪ್ರವೇಶ ಪರೀಕ್ಷೆಯಲ್ಲಿ ಹೆಚ್. ಕೆ. ಎಸ್. ವಿದ್ಯಾರ್ಥಿಗಳ ವಿಶೇಷ ಸಾಧನೆ

**(ಕ್ರಿಯೇಟಿವ್ ಮೀಡಿಯಾ : ಹಾಸನ)**

ಏರ್‌ಕ್ರಾಫ್ಟ್ ಮೈಂಟೆನೆನ್ಸ್ ವಿದ್ಯಾರ್ಥಿಗಳಿಗೆ ಮೇ 6 ರಿಂದ ಮೇ 10 ರ ವರೆಗೆ ನಡೆದ ಪ್ರವೇಶ ಪರೀಕ್ಷೆಯಲ್ಲಿ (AME CET) ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಶೈಕ್ಷಣಿಕ ಸಹಭಾಗಿತ್ವದ ಹೆಚ್. ಕೆ. ಎಸ್ ಪಿ ಯು ಕಾಲೇಜಿನ ವಿದ್ಯಾರ್ಥಿಗಳು ಕ್ರಿಯೇಟಿವ್ ಲರ್ನಿಂಗ್ ಕ್ಲಾಸಸ್‌ನ ಅಡಿಯಲ್ಲಿ ತರಬೇತಿಯನ್ನು ಪಡೆದು ಪ್ರಥಮ ಪ್ರಯತ್ನದಲ್ಲೇ ಈ ಅದ್ಭುತ ಸಾಧನೆಗೈದಿದ್ದಾರೆ .

ಪ್ರಸ್ತುತ ಬಹುಬೇಡಿಕೆಯನ್ನು ಹೊಂದಿರುವ ಏರ್‌ಕ್ರಾಫ್ಟ್ ಮೈಂಟೆನೆನ್ಸ್ ಇಂಜಿನಿಯರಿಂಗ್ ಕೋರ್ಸ್‌ಗೆ ಸೇರಲು ನಡೆಯುವ ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆಗೆ ಹೆಚ್. ಕೆ. ಎಸ್ ವಿದ್ಯಾ ಸಂಸ್ಥೆಯ ಕ್ರಿಯೇಟಿವ್ ಲರ್ನಿಂಗ್ ಕ್ಲಾಸಸ್ ನಡಿಯಲ್ಲಿ ಅತ್ಯುತ್ತಮ ತರಬೇತಿ ನೀಡಲಾಗುತ್ತಿದೆ.

ತಮ್ಮ ಮೊದಲ ಪ್ರಯತ್ನದಲ್ಲೇ ಸುಮಾರು 15 ವಿದ್ಯಾರ್ಥಿಗಳಾದ ಬೀನೇಶ್ ಗೌಡ ಕೆ .ಎ, ಸಿದ್ದಲಿಂಗಯ್ಯ ಹಿರಮಠ್, ಚೇತನ್ ತ್ಯಾಗಿ, ದೀಕ್ಷಿತ್, ಧನುಷ್ ಬಿ. ಕೆ, ಹೇಮಂತ್ ಕುಮಾರ್ ಎ. ವೈ, ದುರ್ಗ ಪ್ರಸಾದ್ ಹೆಚ್. ಡಿ, ಜೀವಿತ್ ಹೆಚ್.ಎಸ್, ನಿಶ್ಚಿತ್ ರಾಜ್ ಎಸ್. ಎನ್, ತೃಷಲಾ ಎಂ, ಸಂದೀಪ್ ವಿ. ಆರ್, ಯಶವಂತ್ ಜೆ ಎಂ, ಮಹಮ್ಮದ್ ಸಾದಿಕ್ ಶರೀಫ್, ರಾಹುಲ್ ಎ ಮತ್ತು ಆದಿತ್ಯ ಎ. ಎಂ ಉತ್ತೀರ್ಣರಾಗಿದ್ದು, ಸಾಧಕರನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಹೆಚ್. ಕೆ.ಸುರೇಶ್, ಕಾರ್ಯದರ್ಶಿಗಳಾದ ಹೆಚ್.ಎಸ್. ಪ್ರಶಾಂತ್ ಗೌಡ, ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

## ಕ್ರಿಯೇಟಿವ್ ಕಾಲೇಜಿನ ಪ್ರಣವ್ ಪಿ ಸಂಜಿ ನಾಟಾ ಪರೀಕ್ಷೆಯಲ್ಲಿ ರಾಜ್ಯಕ್ಕೆ 28 ನೇ ರ್‍ಯಾಂಕ್

**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

ದೇಶಾದಾದ್ಯಂತ ಆರ್ಕಿಟೆಕ್ಚರ್ ಕೋರ್ಸ್ ಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ನಡೆಸಲಾದ ನಾಟಾ (NATA) ಪರೀಕ್ಷೆಯಲ್ಲಿ ಕಾಲೇಜಿನ ವಿದ್ಯಾರ್ಥಿಯಾದ ಪ್ರಣವ್ ಪಿ ಸಂಜಿ ಇವರಿಗೆ ರಾಜ್ಯ ಮಟ್ಟದ 28ನೇ ರ್‍ಯಾಂಕ್, ದೀಕ್ಷಾ ಪಾಂಡು 42ನೇ ರ್‍ಯಾಂಕ್, ವರುಣ್ ಜಿ ನಾಯಕ್ 67ನೇ ರ್‍ಯಾಂಕ್ ಲಭಿಸಿದೆ.


ಪ್ರಣವ್ ಪಿ. ಸಂಜೀ

ಉಳಿದಂತೆ ಸಹನಾ ಎನ್ ಸಿ 104ನೇ ರ್‍ಯಾಂಕ್, ನಾಗಮನಸ್ವಿನಿ ಕೆ 134ನೇ ರ್‍ಯಾಂಕ್, ಧರಿನಾಥ್ ಬಸವರಾಜ್ ಕುಂಬಾರ್ 138ನೇ ರ್‍ಯಾಂಕ್, ದೀಪಕ್ ಕೆ ಎಸ್ 171ನೇ ರ್‍ಯಾಂಕ್, ಸಂತೃಪ್ತಿ 209ನೇ ರ್‍ಯಾಂಕ್, ಶ್ರವಣ್ ಎಸ್ 212ನೇ ರ್‍ಯಾಂಕ್, ಅನ್ವಿತಾ ಕೆ 227ನೇ ರ್‍ಯಾಂಕ್, ಹೇಮಂತ್ ಗೌಡ ಎಸ್ ಆರ್ 229 ನೇ ರ್‍ಯಾಂಕ್, ಸ್ಪರ್ಶ ಪಾರ್ಶ್ವನಾಥ್ 235ನೇ ರ್‍ಯಾಂಕ್, ಅನುಷಾ ಐನಾಪುರ್ 254ನೇ ರ್‍ಯಾಂಕ್, ಕುಶಾಲ್ ಸೂರ್ಯ ಹೆಚ್ ಎಂ 259ನೇ ರ್‍ಯಾಂಕ್, ಸ್ವಸ್ತಿಕ್ ಕೃಷ್ಣಮೂರ್ತಿ ಭಟ್ 273ನೇ ರ್‍ಯಾಂಕ್, ಪೂಜಾ ಟಿ ಎಸ್ 274ನೇ ರ್‍ಯಾಂಕ್, ಕಶಿಶ್ ಎಸ್ ಪಿ 292ನೇ ರ್‍ಯಾಂಕ್, ಗುರುಲಿಂಗಯ್ಯ ಸುರೇಶ್ ಕಂಬಲಿಮಠ್ 300ನೇ ರ್‍ಯಾಂಕ್, ಚಿರಾಗ್ ವಾಸು ಶೆಟ್ಟಿ 332ನೇ ರ್‍ಯಾಂಕ್, ಸಂಜಯ್ ಎಸ್ 335ನೇ ರ್‍ಯಾಂಕ್, ಮುಕ್ತಿ ಜಿ 376 ನೇ ರ್‍ಯಾಂಕ್, ಬೆನೇಶ್ ಗೌಡ ಕೆ ಎ 391ನೇ ರ್‍ಯಾಂಕ್, ತನುಶ್ರೀ ಜೆ ವಿ 434ನೇ ರ್‍ಯಾಂಕ್, ಪಂಕಜ್ ಜೈ ಪ್ರಸಾದ್ 447ನೇ ರ್‍ಯಾಂಕ್, ರಕ್ಷಿತಾ ಹೆಚ್ ಎಸ್ 457ನೇ ರ್‍ಯಾಂಕ್, ಹರಿಪ್ರಸಾದ್ ಡಿ ಎಂ 470 ನೇ ರ್‍ಯಾಂಕ್, ದೀಕ್ಷಾ ಹೆಚ್ ಬಿ 480ನೇ ರ್‍ಯಾಂಕ್, ಪನ್ವಿತ್ ಜಿ ಎನ್ 549ನೇ ರ್‍ಯಾಂಕ್, ನೇಹಾ ಮಯ್ಯಾ 553ನೇ ರ್‍ಯಾಂಕ್, ಚಿನ್ಮಯ್ ಸುರೇಶ್ ಶೆಟ್ಟಿ 585ನೇ ರ್‍ಯಾಂಕ್ ಮತ್ತು ಯಶವಂತ್ ಆರ್ ಗೌಡ 696ನೇ ರ್‍ಯಾಂಕ್ ಗಳಿಸಿರುತ್ತಾರೆ.

NATA ಪರೀಕ್ಷೆಗೆ ಹಾಜರಾದ ಎಲ್ಲಾ 31 ವಿದ್ಯಾರ್ಥಿಗಳೂ ತೇರ್ಗಡೆಯಾಗುವುದರ ಜೊತೆಗೆ ರಾಜ್ಯ ಮಟ್ಟದ 700 ರ ಒಳಗಿನ ರ್‍ಯಾಂಕ್ ಗಳಿಸಿರುವುದು ವಿಶೇಷ.

## ಕ್ರಿಯೇಟಿವ್ ನ ಜಾಗೃತಿ ಕೆ ಪಿ ದೇಶದ ಪ್ರತಿಷ್ಠಿತ ವೈದ್ಯಕೀಯ ಶಿಕ್ಷಣ ಸಂಸ್ಥೆ ಜಿಪ್ಮರ್ (JIPMER)ಗೆ, ಉದ್ಭವ್ ಎಂ ಆರ್ AIIMS ಗೆ ಆಯ್ಕೆ

**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

ಕಳೆದ ಮೇ ತಿಂಗಳಿನಲ್ಲಿ ನಡೆದ ನೀಟ್ ಪರೀಕ್ಷೆಯಲ್ಲಿ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ಪ್ರವೇಶ ಆರಂಭಗೊಂಡಿದ್ದು ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಜಾಗೃತಿ ಕೆ ಪಿ ದೇಶದ ಪ್ರತಿಷ್ಠಿತ ವೈದ್ಯಕೀಯ ವಿದ್ಯಾಲಯ ಪುದುಚೆರಿಯ ಜಿಪ್ಮರ್ ಸಂಸ್ಥೆಯಲ್ಲಿ ಪ್ರವೇಶ ಪಡೆದುಕೊಂಡಿದ್ದಾರೆ. ದೇಶಾದ್ಯಂತ ಇಪ್ಪತ್ತು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಬರೆದ ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಜಿಪ್ಮರ್ (JIPMER)ನಲ್ಲಿ ಪ್ರವೇಶ ಪಡೆಯುವುದು ಅಸಾಮಾನ್ಯ ಸಾಧನೆಯಾಗಿದೆ. ಕು. ಜಾಗೃತಿ ಕೆ ಪಿ ನೀಟ್ ಪರೀಕ್ಷೆಯಲ್ಲಿ 661 ಅಂಕ ಗಳಿಸುವುದರ ಮೂಲಕ ಜಿಪ್ಮರ್ (JIPMER) ನಂತಹ ಉನ್ನತ ವಿದ್ಯಾಲಯದಲ್ಲಿ ದೇಶದಲ್ಲಿಯೇ ಕೇವಲ 243 ಸೀಟ್‌ಗಳನ್ನು ಹೊಂದಿರುವ ಸಂಸ್ಥೆಯಲ್ಲಿ ಪ್ರವೇಶ ಪಡೆದಿರುವುದು ಹೆಮ್ಮೆಯ ಸಂಗತಿಯಾಗಿದೆ.


ಜಾಗೃತಿ ಕೆ.ಪಿ


ಉದ್ಭವ್ ಎಂ.ಆರ್

ಹಾಗೂ ಕ್ರಿಯೇಟಿವ್ ಕಾಲೇಜಿನ ಇನ್ನೋರ್ವ ಪ್ರತಿಭಾವಂತ ವಿದ್ಯಾರ್ಥಿ ಉದ್ಭವ್ ಎಂ ಆರ್ ದೇಶದ ಪ್ರತಿಷ್ಠಿತ ವೈದ್ಯಕೀಯ ವಿದ್ಯಾ ಸಂಸ್ಥೆಯಾದ ಏಮ್ಸ್ (AIIMS) ನಾಗ್ಪುರ ದಲ್ಲಿ ಪ್ರವೇಶ ಪಡೆದುಕೊಂಡಿದ್ದಾರೆ. ದೇಶಾದ್ಯಂತ ಒಟ್ಟು 2046 ಸೀಟ್ ಗಳಿರುವ ಏಮ್ಸ್ ನಲ್ಲಿಯೂ ಪ್ರವೇಶ ಪಡೆದುಕೊಂಡಿರುವುದು ಅಪ್ರತಿಮ ಸಾಧನೆಯಾಗಿದೆ.

ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದಲ್ಲಿ ನಿರಂತರವಾಗಿ ನಡೆಯುವ ನೀಟ್ ತರಬೇತಿ ಪಡೆದ ಸಂಸ್ಥೆಯ ಅನೇಕ ವಿದ್ಯಾರ್ಥಿಗಳು ತಮ್ಮ ಪ್ರಥಮ ಪ್ರಯತ್ನದಲ್ಲಿಯೇ ದೇಶದ ಇನ್ನೂ ಅನೇಕ ವೈದ್ಯಕೀಯ ವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹತೆ ಗಳಿಸಿದ್ದಾರೆ. ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗಾಗಳ ವೈದ್ಯಕೀಯ ವಿದ್ಯಾಲಯಗಳಲ್ಲಿ ಸೀಟು ಪಡೆಯಲು ಕ್ರಿಯೇಟಿವ್ ನ ಅನೇಕ ವಿದ್ಯಾರ್ಥಿಗಳು ಪ್ರಥಮ ಹಂತದ ಕೌನ್ಸಲಿಂಗ್ ನಲ್ಲಿದ್ದಾರೆ. ಕಳೆದ ವರ್ಷವೂ ಸಂಸ್ಥೆಯ ಹಲವಾರು ವಿದ್ಯಾರ್ಥಿಗಳು ಪ್ರತಿಷ್ಠಿತ ವೈದ್ಯಕೀಯ ವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿರುತ್ತಾರೆ. ಸಂಸ್ಥೆ ಪ್ರಾರಂಭವಾದ ಎರಡೇ ವರ್ಷಗಳಲ್ಲಿ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ಅತ್ಯುತ್ತಮ ಸಾಧನೆಗೈದಿದೆ.

## ಕ್ರಿಯೇಟಿವ್‌ನ 7 ವಿದ್ಯಾರ್ಥಿಗಳು ಜೆ.ಇ.ಇ ಅಡ್ವಾನ್ಸ್ಡ್‌ನಲ್ಲಿ ತೇರ್ಗಡೆ


ಉದ್ಭವ್ ಎಂ. ಆರ್


ಜಾಗೃತಿ ಕೆ. ಪಿ


ಆದಿತ್ಯ ವಿ. ಹೊಳ್ಳ


ಅಭಯ್ ಎಸ್. ಎಸ್


ಕಾರ್ತಿಕ್ ಕೃಷ್ಣಮೂರ್ತಿ ಹೆಗಡೆ


ಸೂರಜ್ ಕುಮಾರ್ ಎನ್


ಪ್ರಣವ್ ಪಿ. ಸಂಜೀ

**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

ದೇಶದ ಪ್ರತಿಷ್ಠಿತ ಐ.ಐ.ಟಿ ಸಂಸ್ಥೆಯಲ್ಲಿ ಬಿ.ಇ (B.E) ಪದವಿ ಪ್ರವೇಶಕ್ಕೆ ನಡೆಯುವ ರಾಷ್ಟ್ರಮಟ್ಟದ ಅತೀ ಕಠಿಣವಾದ ಜೆ.ಇ.ಇ (JEE) ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ಉದ್ಭವ್ ಎಂ ಆರ್, ಜಾಗೃತಿ ಕೆ ಪಿ, ಆದಿತ್ಯ ವಿ ಹೊಳ್ಳ, ಅಭಯ್ ಎಸ್ ಎಸ್, ಕಾರ್ತಿಕ್ ಕೃಷ್ಣಮೂರ್ತಿ ಹೆಗಡೆ, ಸೂರಜ್ ಕುಮಾರ್ ಎನ್, ಪ್ರಣವ್ ಪಿ ಸಂಜೀ ಉನ್ನತ ರ್‍ಯಾಂಕ್‌ನೊಂದಿಗೆ ತೇರ್ಗಡೆ ಹೊಂದಿದ್ದಾರೆ. ಅದರಲ್ಲಿ ಉದ್ಭವ್ ಎಂ ಆರ್ PREP-ST ಯಲ್ಲಿ 3 ನೇ ರ್‍ಯಾಂಕ್, ಜಾಗೃತಿ ಕೆ ಪಿ 24 ನೇ ರ್‍ಯಾಂಕ್ ಗಳಿಸಿ ವಿಶೇಷ ಸಾಧನೆ ಗೈದಿದ್ದಾರೆ.

ಪರೀಕ್ಷೆಗೆ ಕುಳಿತ ಕ್ರಿಯೇಟಿವ್ ನ ಕೇವಲ 12 ವಿದ್ಯಾರ್ಥಿಗಳಲ್ಲಿ 7 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ದೇಶದ ಪ್ರತಿಷ್ಠಿತ 23 IIT ಗಳ ಪ್ರವೇಶಕ್ಕೆ ನಡೆಯುವ ಆಯ್ಕೆ ಪ್ರಕ್ರಿಯೆಗೆ ಅರ್ಹರಾಗಿದ್ದಾರೆ. ಸಂಸ್ಥೆಯ ಆರಂಭದ ವರ್ಷಗಳಲ್ಲೇ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಉನ್ನತ ಫಲಿತಾಂಶ ಗಳಿಸುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ.

**ಕಾವ್ಯೋಕ್ತಿ**

ಬಾಚಿಕೋ ನಿನ್ನ ವಸ್ತುಗಳನ್ನು, ಹೊರಡು ತಡ ಮಾಡಿದರೆ
ಪ್ರಾಚೀನ ಬರಗಾಲಗಳಂತೆ ಈ ಮಾಲು ನಿನ್ನನ್ನು ನುಂಗುತ್ತದೆ. – ಡಾ. ಹೆಚ್.ಎಸ್. ಶಿವಪ್ರಕಾಶ್



## ಕ್ರಿಯೇಟಿವ್ ನಿನಾದ ಸಂಚಿಕೆ 4 ಹಾಗೂ ವಿಶೇಷ ಪುರವಣಿ ಬಿಡುಗಡೆ



**ಕಾರ್ಕಳ:** ಕ್ರಿಯಾಶೀಲ ಮನಸ್ಸುಗಳನ್ನು ಕಟ್ಟುವುದರ ಮೂಲಕ ಸಮಾಜಮುಖಿ ಚಿಂತನೆ ಹಾಗೂ ಶೈಕ್ಷಣಿಕ ಕ್ರಾಂತಿಯ ಮಹಾತ್ವಾಕಾಂಕ್ಷೆಯೊಂದಿಗೆ ಆರಂಭಿಸಲಾದ "ಕ್ರಿಯೇಟಿವ್ ನಿನಾದ"ದ ನಾಲ್ಕನೇ ಸಂಚಿಕೆ ಹಾಗೂ ವಿಶೇಷ ಪುರವಣಿಯನ್ನು ಬಿಡುಗಡೆಗೊಳಿಸಲಾಯಿತು.

ಪತ್ರಿಕೆಯನ್ನು ಅನಾವರಣಗೊಳಿಸಿ ಮಾತನಾಡಿದ ಸಂಸ್ಥಾಪಕರಾದ ಡಾ. ಗಣನಾಥ ಶೆಟ್ಟಿಯವರು ಕ್ರಿಯಾತ್ಮಕ ಮತ್ತು ಸೃಜನ ಶೀಲತೆಯನ್ನು ಒಂದುಗೂಡಿಸಿ ಹೊಸ ವಿಚಾರವಂತಿಕೆಗಳನ್ನು ಮೂಡಿಸುವ ಸಂಚಿಕೆ ಸಮಾಜದಲ್ಲಿ ಜಾಗೃತಿ ಮೂಡಿಸುವಂತಾಗಲಿ ಎಂದು ಹಾರೈಸಿದರು. ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಒಂದೇ ಸೂರಿನಡಿ ಯಶಸ್ಸಿನ ಆಯ್ಕೆಗೆ ಕ್ರಿಯೇಟಿವ್ ಮುಂಚೂಣಿಯಲ್ಲಿದೆ ಎಂದು ಅಭಿಪ್ರಾಯ ಪಟ್ಟರು.

ಸಂಸ್ಥಾಪಕರಾದ ಅಮೃತ್ ರೈ ಮಾತನಾಡಿ ಕ್ರಿಯಾಶೀಲ ವ್ಯಕ್ತಿತ್ವಗಳಿಗೆ ವಿಶೇಷ ಅಭಿವ್ಯಕ್ತಿ ನೀಡುವ ಮೂಲಕ ನಿನಾದ ಮುನ್ನಡಿಯಾಗಿದೆ. ಹೊಸ ಯೋಚನೆ, ಯೋಜನೆಗಳೊಂದಿಗೆ ಕಾರ್ಯ ಪ್ರವೃತ್ತರಾಗಲಿದ್ದೇವೆ ಎಂದರು ಈ ಸಂದರ್ಭದಲ್ಲಿ ಕ್ರಿಯೇಟಿವ್ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಅಶ್ವತ್ ಎಸ್. ಎಲ್, ಆದರ್ಶ ಎಂ. ಕೆ, ವಿಮಲ್ ರಾಜ್ ಹಾಗೂ "ನಿನಾದ" ಸಂಪಾದಕರಾದ ರಾಘವೇಂದ್ರ ರಾವ್, ಉಪನ್ಯಾಸಕರಾದ ವಿನಾಯಕ ಜೋಗ್, ರಾಜೇಶ್ ಶೆಟ್ಟಿ, ರಾಮಕೃಷ್ಣ ಹೆಗಡೆ, ಪಿ.ಆರ್.ಒ ಲಿಶನ್ ಗೌಡ ಮತ್ತು ನರೇಶ್ ಕುಮಾರ್ ಉಪಸ್ಥಿತರಿದ್ದರು.

## ಕ್ರಿಯೇಟಿವ್ ಪದವಿ ಪೂರ್ವ ಕಾಲೇಜು ಹಾಗೂ ಶಿರ್ಡಿ ಸಾಯಿಬಾಬಾ ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳಿಂದ ಆಗುಂಬೆ ಘಾಟ್ ನ ಸ್ವಚ್ಛತೆ

**ಕಾರ್ಕಳ:** ರಾಷ್ಟ್ರೀಯ ಸೇವಾ ಯೋಜನೆಯ (N.S.S.) ವತಿಯಿಂದ ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜು ಮತ್ತು ಶಿರ್ಡಿ ಸಾಯಿಬಾಬ ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳಿಂದ ಆಗುಂಬೆಯ ಘಾಟಿಯ ಇಕ್ಕೆಲಗಳನ್ನು "ಸ್ವಚ್ಛತೆಯೆಡೆಗೆ ನಮ್ಮ ಹೆಜ್ಜೆ, ಪರಿಸರ ಕಾಳಜಿ ನಮ್ಮೆಲ್ಲರ ಹೊಣೆ" ಎಂಬ ಧ್ಯೇಯ ವಾಕ್ಯದೊಂದಿಗೆ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.





ಈ ಅರಣ್ಯದಲ್ಲಿ ಅಳಿವಿನಂಚಿನಲ್ಲಿರುವ ಅನನ್ಯ ಪ್ರಾಣಿ, ಪಕ್ಷಿ ಪ್ರಬೇಧಗಳಿವೆ. ನಾವು ಮಾಡುವ ಪ್ಲಾಸ್ಟಿಕ್ ತ್ಯಾಜ್ಯದಿಂದ ಅವುಗಳ ಜೀವನ ದುಸ್ತರವಾಗುವಂತಾಗಿದೆ. ಆದ್ದರಿಂದ ನಾವು ಪ್ರಕೃತಿಯನ್ನು ಹಾಳುಗೆಡಹುವ ಕಾರ್ಯ ಬಿಟ್ಟು ಸಾಧ್ಯವಾದಷ್ಟು ಪರಿಸರದ ಸ್ವಚ್ಛತೆಗೆ ಆದ್ಯತೆಯಾಗುವಂತೆ ಬದುಕಬೇಕಾಗಿದೆ ಎಂದು ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಹೇಳಿದರು.

ನಾವು ಶಿಕ್ಷಿತರಾದರೂ ಅನಕ್ಷರಸ್ಥರಂತೆ ವರ್ತಿಸುತ್ತಿದ್ದೇವೆ. ನಾವು ಬಳಸಿದ ತ್ಯಾಜ್ಯ ವಸ್ತುಗಳನ್ನು, ಕಸ, ಪ್ಲಾಸ್ಟಿಕ್ ಇತ್ಯಾದಿಗಳನ್ನು ಜವಾಬ್ದಾರಿಯಿಲ್ಲದೇ ಕಂಡಲ್ಲಿ ಎಸೆಯುತ್ತಿದ್ದೇವೆ. ಅದು ಕಾಡಿನ ಪರಿಸರವನ್ನು ಮಾಲಿನ್ಯಗೊಳಿಸಿ ಅಲ್ಲಿನ ಪ್ರಾಣಿಪಕ್ಷಿಗಳಿಗೂ ತೊಂದರೆಯುಂಟುಮಾಡುತ್ತಿದೆ. ಆದ್ದರಿಂದ ಪ್ರವಾಸಿ ಸ್ಥಳ ಹಾಗೂ ಪ್ರೇಕ್ಷಣೀಯ ಸ್ಥಳಗಳನ್ನು ಸ್ವಂತ ಕಾಳಜಿಯಿಂದ ನಿರ್ಮಲವಾಗಿಡುವ ಕಡೆಗೆ ಗಮನ ಹರಿಸಬೇಕಾಗಿದೆ ಎಂದು ಎನ್.ಎಸ್.ಎಸ್ ನ ಯೋಜನಾಧಿಕಾರಿಯಾದ ಶ್ರೀ ಉಮೇಶ್ ಕರೆ ನೀಡಿದರು.

ಶಿರ್ಡಿ ಡಿಗ್ರಿ ಕಾಲೇಜಿನ ಆಶೀಶ್ ಶೆಟ್ಟಿ ಮಾತನಾಡಿ ಪ್ರತಿಯೊಬ್ಬರಿಗೂ ಸಾಮಾಜಿಕ ಪ್ರಜ್ಞೆಯಿರಬೇಕು. ಕೊಳಕು ಮಾಡುವ ಸಂಸ್ಕೃತಿ ನಿಲ್ಲಬೇಕು. ಎಲ್ಲರೂ ಬದುಕಿ ಬಾಳುವ ವಾತಾವರಣ ನಿರ್ಮಾಣ ಮಾಡುವುದಕ್ಕಾಗಿ ನಾವೆಲ್ಲ ಟೊಂಕಕಟ್ಟಿ ನಿಲ್ಲಬೇಕಾದ ಅನಿವಾರ್ಯತೆಯಿದೆ. ಪರಿಸರ ಪ್ರೀತಿ ಬೆಳೆಸೋಣವೆಂದರು.

## "ಸತ್ಯ ಮತ್ತು ಉತ್ತಮ ಚಿಂತನೆಯೇ ಸಾಹಿತ್ಯದ ಧ್ಯೇಯ"

### – ಶ್ರೀ ಎಚ್. ಎಂ ನಾಗರಾಜ ರಾವ್ ಕಲ್ಕಟ್ಟೆ




**ಕಾರ್ಕಳ:** ಯಶಸ್ಸಿಗಾಗಿ ನಿರೀಕ್ಷೆಗಳಿರುತ್ತವೆ. ನಿರೀಕ್ಷೆಯೇ ಪ್ರಧಾನವಾಗಬಾರದು. ಪ್ರತೀ ಸಲವೂ ಪ್ರಯತ್ನ ಪಡುವ ಮೂಲಕ ಯಶಸ್ಸು ಗಳಿಸಲು ಸಾಧ್ಯವಿದೆ. ಅಪಾರ ಪ್ರಯತ್ನಕ್ಕೆ ಅಪರಿಮಿತ ಫಲವಿದೆ. ಭಾಷೆ ಎಂಬುದು ಜ್ಞಾನದ ವಾಹಿನಿ. ಅದು ಜ್ಞಾನವೇ ಆಗಿರಬೇಕಿಲ್ಲ. ಸಂವಹನದಲ್ಲೂ ಸಾಹಿತ್ಯವಿದೆ. ಅದು ಹೃದಯದ ಭಾಷೆಯೇ ಆದಾಗ ಸರಳ ಸಾಹಿತ್ಯವಾಗುತ್ತದೆ ಎಂದು ಕಳಸಾಪುರ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಚ್. ಎಂ ನಾಗರಾಜ ರಾವ್ ಕಲ್ಕಟ್ಟೆಯವರು ಕಾಲೇಜಿನಲ್ಲಿ ನಡೆದ ಸಾಹಿತ್ಯ–ಸಾಂಗತ್ಯ ಸರಣಿ ಕಾರ್ಯಕ್ರಮ–7 ರಲ್ಲಿ ಪಾಲ್ಗೊಂಡು "ಸಾಹಿತ್ಯ ಸಹವಾಸ ವ್ಯಕ್ತಿತ್ವ ವಿಕಸನ" ಎಂಬ ವಿಚಾರದ ಕುರಿತು ಉಪನ್ಯಾಸ ನೀಡಿದರು.

## ಕ್ರಿಯೇಟಿವ್ ಗುರುದೇವೋಭವ



**ಕಾರ್ಕಳ:** ಶಿಕ್ಷಕ ಮತ್ತು ಶಿಕ್ಷಕ ವೃತ್ತಿಗಳು ಅತ್ಯಂತ ಶ್ರೇಷ್ಠವಾದದ್ದು ವಿದ್ಯಾರ್ಥಿಗಳಲ್ಲಿ ಸದ್ಭಾವನೆಯನ್ನು ಬೆಳೆಸುತ್ತಾ, ಶಿಕ್ಷಕನೂ ಅಧ್ಯಯನಶೀಲನಾಗಬೇಕು. ನಿರಂತರವಾಗಿ ಗುರುತರವಾದ ಜವಾಬ್ದಾರಿಯಿಂದ ಬೋಧನೆ ಮಾಡುವವರಾಗಬೇಕು ಎಂದು ಪ್ರೊ.ಬಿ.ಪದ್ಮನಾಭ ಗೌಡ ಕರೆ ನೀಡಿದರು. ಅವರು ಕ್ರಿಯೇಟಿವ್ ಪ.ಪೂ. ಕಾಲೇಜಿನಲ್ಲಿ ಶಿಕ್ಷಕರ ದಿನದ ಪ್ರಯುಕ್ತ 'ಗುರುದೇವೋ ಭವ' ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಇನ್ನೋರ್ವ ಅತಿಥಿ ಚೇತನಾ ವಿಶೇಷ ಶಾಲೆಯ ಮುಖ್ಯೋಪಾಧ್ಯಾಯಿನಿ ಹೇಮಲತಾ ಶೆಟ್ಟಿ ಮಾತನಾಡಿ ಗುರುಗಳೆಂದರೆ ಅಪಾರ ಗೌರವದಿಂದ ಕಾಣಬೇಕಾದ ವ್ಯಕ್ತಿ, ಅಂತಹ ವ್ಯಕ್ತಿತ್ವಕ್ಕೆ ಜಗತ್ತಿನಲ್ಲಿ ಅಪೂರ್ವ ಮನ್ನಣೆಯಿದೆ ಎಂದು ನುಡಿದರು.

ಈ ಸಂದರ್ಭದಲ್ಲಿ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿಂದಿ ಉಪನ್ಯಾಸಕ ವಿನಾಯಕ ಜೋಗ್ ಹಾಗೂ ಜೀವಶಾಸ್ತ್ರ ಉಪನ್ಯಾಸಕ ಆದಂ ಶೇಕ್ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ನಂತರ ಸಂಸ್ಥೆಯ ಉಪನ್ಯಾಸಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಸಂಸ್ಥಾಪಕರಾದ ಅಶ್ವತ್ ಎಸ್.ಎಲ್ ಪ್ರಾಸ್ತಾವಿಕ ನುಡಿಗಳೊಂದಿಗೆ ಸಂಸ್ಥೆಯ ಆದರ್ಶ ಮತ್ತು ಕನಸನ್ನು ಹಂಚಿಕೊಂಡರು. ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಡಾ.ಗಣನಾಥ ಶೆಟ್ಟಿ, ಅಮೃತ್ ರೈ, ಆದರ್ಶ ಎಂ.ಕೆ, ವಿಮಲ್ ರಾಜ್ ಜಿ, ಗಣಪತಿ ಭಟ್ ಕೆ.ಎಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## "ರಸಾಯನಶಾಸ್ತ್ರವು ಶಿಕ್ಷಕರಿಗೆ ಬೋಧನಾ ಅಭ್ಯಾಸ ಮತ್ತು ಜ್ಞಾನವನ್ನು ಹೆಚ್ಚಿಸುತ್ತದೆ"

### – ಶ್ರೀ ಮಾರುತಿ

**ಉಡುಪಿ:** ರಸಾಯನ ಶಾಸ್ತ್ರ ಕಾರ್ಯಗಾರವನ್ನು ಉಡುಪಿ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಶ್ರೀ ಮಾರುತಿಯವರು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಸಹಸಂಸ್ಥಾಪಕರಾದ ಶ್ರೀ ಆದರ್ಶ ಎಂ ಕೆ., ಪ್ರಾಂಶುಪಾಲರಾದ ಸ್ಟ್ಯಾನಿ ಲೋಬೋ, ಉಡುಪಿ ಜಿಲ್ಲಾ ಪದವಿಪೂರ್ವ ಕಾಲೇಜುಗಳ ರಸಾಯನಶಾಸ್ತ್ರ ಉಪನ್ಯಾಸಕರ ವೇದಿಕೆ ಅಧ್ಯಕ್ಷರಾದ ಶ್ರೀ ಪಿ ವಸಂತ್ ಆಚಾರ್, ಯು.ಎಲ್ ಭಟ್, ಮಂಜುನಾಥ್ ಭಟ್ ಉಪಸ್ಥಿತರಿದ್ದರು.



## 'ಕ್ರಿಯೇಟಿವ್ ಸಮಾಗಮ' | ಕಾರ್ಕಳ ಕ್ರಿಯೇಟಿವ್ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ



(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)

ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ (ರಿ) ಕಾರ್ಕಳ ಇದರ ವತಿಯಿಂದ 2023–24 ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ 'ಕ್ರಿಯೇಟಿವ್ ಸಮಾಗಮ' ಕಾಲೇಜಿನ ನೇಸರ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿ ವಾರ್ಷಿಕ ಸಂಚಿಕೆ "ಸಪ್ತಸ್ವರ"ವನ್ನು ಬಿಡುಗಡೆಗೊಳಿಸಿ ಮಾತನಾಡಿದ ಡಾ. ಗಣನಾಥ ಶೆಟ್ಟಿಯವರು ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸಾಧನೆ ಮಾಡುವಂತಾಗಲಿ ಎಂದು ಆಶಿಸಿದರು.

ಸಂಸ್ಥಾಪಕರಾದ ಅಮೃತ್ ರೈ ಕಾಲೇಜಿನ ವಿವಿಧ ಸಂಘಗಳನ್ನು ಉದ್ಘಾಟಿಸಿದರು. ಪ್ರಾಸ್ತಾವಿಕ ಮಾತುಗಳನ್ನಾಡಿದ ಅಶ್ವತ್ ಎಸ್. ಎಲ್ ರವರು ಬದುಕನ್ನು ನಿರ್ಧರಿಸುವ ಪಿ.ಯು ಶಿಕ್ಷಣದಲ್ಲಿ ತಾವುಗಳೆಲ್ಲ ತಮ್ಮ ಅಪ್ಪ ಅಮ್ಮಂದಿರ ಭರವಸೆ ಉಳಿಸಿಕೊಳ್ಳುವಂತಹ ಸಾಧನೆ ಮಾಡುವಂತಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಮಾತನಾಡಿ ಕ್ರಿಯಾಶೀಲ ವ್ಯಕ್ತಿತ್ವದಿಂದ ಮಾತ್ರ ಸವಾಲುಗಳನ್ನು ಎದುರಿಸಲು ಸಾಧ್ಯ. ಸಾಧನೆಗೆ ಯಾವುದೇ ಅಡ್ಡದಾರಿಗಳಿಲ್ಲ. ನೇರ ದಾರಿಯ ಪರಿಶ್ರಮವೇ ಸಾಧನೆಯ ಮೆಟ್ಟಿಲು ಆದ್ದರಿಂದ ವಿದ್ಯಾರ್ಥಿಗಳು ಕಲಿಕೆಯ ಅವಧಿಯಲ್ಲಿ ಉದಾಸೀನ ಪ್ರವೃತ್ತಿಯವರಾಗದೆ ನಿರಂತರ ಶ್ರಮದಿಂದ ಉನ್ನತಿಗೇರುವಂತಾಗಲಿ ಎಂದು ನುಡಿದರು.

2022–23 ನೇ ಸಾಲಿನ ಪ್ರಥಮ ಪಿಯುಸಿ ತರಗತಿಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನಿಗಳಾದ ವಿದ್ಯಾರ್ಥಿಗಳನ್ನು ಸಂಸ್ಥಾಪಕರಾದ ಆದರ್ಶ ಎಂ. ಕೆ ಮತ್ತು ಗಣಪತಿ ಭಟ್ ಕೆ. ಎಸ್ ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪನ್ಯಾಸಕ, ಉಪನ್ಯಾಸಕೇತರ ವೃಂದದವರು ಉಪಸ್ಥಿತರಿದ್ದರು.

ಕಾವ್ಯೋಕ್ತಿ | ಹೆದರಿ ಓಡಿದರೆ ಹೇಡಿ ಗೊತ್ತುಪಡಿಸುವೆ ಜಗಕೆ ನಾನೆಂಥ ಹಠಮಾರಿ!
– ಎಂ.ಎನ್. ವ್ಯಾಸರಾವ್



# ಕ್ರಿಯೇಟಿವ್ ಹೊಂಗಿರಣ

**ಹೊಂಗಿರಣ ಪ್ರತಿಭಾನ್ವಿತ ಬಡ ವಿದ್ಯಾರ್ಥಿ ಗಳಿಗೆ ಉಚಿತ ಶಿಕ್ಷಣ ನೀಡುವ ವಿದ್ಯಾದಾನ ಯೋಜನೆ. ಸಮಾಜದಲ್ಲಿರುವ ಆರ್ಥಿಕವಾಗಿ ತೀರ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರ ಬದುಕಿಗೆ ಬೆಳಕಾಗುವ ಯೋಜನೆ. ವಿದ್ಯಾದಾನವೆಂಬುದು ಬಹು ಮಹತ್ವ ಪೂರ್ಣವೆಂದು ಭಾವಿಸಿ ಯಾವ ವಿದ್ಯಾರ್ಥಿಯೂ ಶಿಕ್ಷಣದಿಂದ ವಂಚಿತವಾಗಬಾರದೆಂಬ ಮಹದುದ್ದೇಶವನ್ನಿರಿಸಿ ಹಮ್ಮಿಕೊಂಡ ಯೋಜನೆ ಇದಾಗಿದೆ. ಈ ಮಹತ್ಕಾರ್ಯದಲ್ಲಿ ನಮ್ಮೊಂದಿಗೆ ಅನೇಕ ಗಣ್ಯರು, ಮಹನೀಯರು ಕೈ ಜೋಡಿಸಿ ಸಹಾಯ ಸಹಕಾರ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಅಂತಹ ಮಹನೀಯರಲ್ಲಿ,**






### ಶ್ರೀಮತಿ ಪೂರ್ಣಿಮಾ ಶೆಣೈ

ಶ್ರೀಮತಿ ಪೂರ್ಣಿಮಾ ಶೆಣೈ ಅವರು ಕಾರ್ಕಳದಲ್ಲಿ ಪರಿಸರದಲ್ಲಿ ಚಿರಪರಿಚಿತರು. ಕಾರ್ಕಳ ಜಿಲ್ಲೆಯ ಅನೇಕ ಸರಕಾರಿ ಶಾಲೆಗಳಲ್ಲಿ ಶಿಕ್ಷಕಿಯಾಗಿ ವೃತ್ತಿ ನಿರ್ವಹಿಸಿ, ತಾಲೂಕು ಮಟ್ಟದ ಉತ್ತಮ ಶಿಕ್ಷಕಿ, ಜಿಲ್ಲಾಮಟ್ಟದ ಉತ್ತಮ ಶಿಕ್ಷಕಿ ಮತ್ತು ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಶಿಕ್ಷಕಿಯಾಗಿ ಸಮ್ಮಾನಗೊಂಡವರು. ಶ್ರೀಮತಿ ಪೂರ್ಣಿಮಾ ಶೆಣೈಯವರು ಸುದೀರ್ಘ ಅವಧಿಯವರೆಗೆ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿ ಸಾವಿರಾರು ವಿದ್ಯಾರ್ಥಿಗಳ ಜೀವನಕ್ಕೆ ಆದರ್ಶ ಮತ್ತು ಪ್ರೇರಣೆ ನೀಡಿದವರು. ಪ್ರಸ್ತುತ ಸೇವೆಯಿಂದ ನಿವೃತ್ತಿ ಹೊಂದಿದ್ದರೂ ಪ್ರವೃತ್ತಿಯಲ್ಲಿ ಇನ್ನೂ ಶಿಕ್ಷಣ ಕ್ಷೇತ್ರಕ್ಕೆ ತುಡಿತ ಹೊಂದಿ ಮಾಳ ಗುರುಕುಲ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾಭಿಮಾನಿಯಾದ ಪೂರ್ಣಿಮಾ ಶೆಣೈಯವರು ತಮ್ಮ ಮಗ ಮತ್ತು ಕುಟುಂಬದವರೊಂದಿಗೆ ಸೇರಿ ನಮ್ಮ ಮಹತ್ವಾಕಾಂಕ್ಷಿ ಯೋಜನೆಯಾದ "ಹೊಂಗಿರಣ"ಕ್ಕೆ ಉದಾರ ಮನಸ್ಸಿನಿಂದ, ಕೊಡುಗೈ ದಾನಿಯಾಗಿ ನಮ್ಮ ಸಂಸ್ಥೆಯೊಂದಿಗೆ ಸಹಕರಿಸಿದ್ದಾರೆ. ಶಿಕ್ಷಣಕ್ಕೆ ಅವರು ನೀಡಿರುವ ಈ ಅಪೂರ್ವ ಬೆಂಬಲವನ್ನು ಸದಾ ಕಾಲ ಸಂಸ್ಥೆ ಸ್ಮರಿಸುತ್ತಿರುತ್ತದೆ. ಶ್ರೀಮತಿ ಪೂರ್ಣಿಮಾ ಶೆಣೈ ಅವರಿಗೆ ಭಗವಂತನು ಆಯುರಾರೋಗ್ಯ, ಸಂಪತ್ತು ಕರುಣಿಸಲಿ ಎಂದು ಬೇಡಿಕೊಳ್ಳುತ್ತ, ಧನ್ಯವಾದ ಸಮರ್ಪಿಸುತ್ತಿದ್ದೇವೆ.

### ಶ್ರೀ ಶ್ರೀನಿವಾಸ್ (ಎಸ್.ಪಿ ಕಡೂರು, ಚಿಕ್ಕಮಗಳೂರು ಜಿಲ್ಲೆ) ರೋಹಿತ್ ಕುಮಾರ್ ಎಸ್, ದ್ವಿತೀಯ ಪಿಯುಸಿ ಪಿ.ಸಿ.ಎಂ.ಬಿ ಇವರ ಪಾಲಕರು))



ಪ್ರಸ್ತುತ ಕಡೂರಿನಲ್ಲಿ ಪೋಲೀಸ್ ತರಬೇತಿ ಕೇಂದ್ರದಲ್ಲಿ ತರಬೇತಿ ವರಿಷ್ಠಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಶ್ರೀನಿವಾಸ ಅವರು ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಯಾಗಿ ಜನಪ್ರಿಯರಾದವರು. ಮೃದು ಹೃದಯಿ, ವಿಶಾಲ ಮನೋಭಾವದ ಶ್ರೀನಿವಾಸ್ ರವರು ನಮ್ಮ ಸಂಸ್ಥೆಯೊಂದಿಗೆ ಎಲ್ಲ ಸಂದರ್ಭಗಳಲ್ಲೂ ಬೆಂಬಲಕ್ಕೆ ನಿಂತಿರುವವರು ಮತ್ತು ಸಹಾಯಹಸ್ತ ನೀಡಿದವರು. ಶ್ರೀಯುತರು ನಮ್ಮ ಸಂಸ್ಥೆಯ ಮೇಲಿನ ಅಭಿಮಾನ ಮತ್ತು ಪ್ರೀತಿಯಿಂದ "ಹೊಂಗಿರಣ" ಯೋಜನೆಗೆ ತಮ್ಮ ಸ್ವಯಂ ಪ್ರೀತಿಯಿಂದ ಸಹಾಯ ಸಹಕಾರ ನೀಡಿದ್ದಾರೆ. ಶಿಕ್ಷಣ ಕ್ಷೇತ್ರದ ಮೇಲೆ ಅವರು ಇಟ್ಟಿರುವ ಅಭಿಮಾನಕ್ಕೆ ನಾವು ಚಿರಋಣಿಗಳು. ಅವರ ಈ ಸಹಕಾರ ಹೃದಯ ಶ್ರೀಮಂತಿಕೆ ಹೀಗೆಯೇ ಸಮಾಜದ ಒಳಿತಿನ ಕಾರ್ಯದಲ್ಲಿ ನಮ್ಮೊಂದಿಗಿರಲಿ ಎಂದು ಕೇಳಿಕೊಳ್ಳುತ್ತಾ. ಅವರಿಗೆ ಸಂಸ್ಥೆ ಆಭಾರಿಯಾಗಿದೆ.



### ಶ್ರೀ ಪ್ರಭುದೇವ ಹೋಳಗಿ

ಮೂಲತಃ ಜಮಖಂಡಿಯವರಾಗಿದ್ದು ಸ್ವತಃ ಶಿಕ್ಷಣ ಸಂಸ್ಥೆಯೊಂದನ್ನು ನಡೆಸುತ್ತಿರುವ ಶ್ರೀ ಪ್ರಭುದೇವ ಹೋಳಗಿಯವರು ಶಿಕ್ಷಣ ಪ್ರೇಮಿ, ಅತ್ಯುತ್ತಮ ಗಣಿತ ಅಧ್ಯಾಪಕ. ವಿದ್ಯೆ ಮಾತ್ರ ಮನುಷ್ಯನನ್ನು ಉನ್ನತಿಗೇರಿಸುವ ಶಕ್ತಿ ಹೊಂದಿದೆ ಎಂಬುದನ್ನು ಮನಗಂಡು ನಮ್ಮ ಸಂಸ್ಥೆಯ ವತಿಯಿಂದ 'ನಿನಾದ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರತಂದಾಗ ತುಂಬು ಹೃದಯದಿಂದ ಸ್ವಾಗತಿಸಿ, ಅದಕ್ಕೆ ಬೆಂಬಲ ವ್ಯಕ್ತಪಡಿಸಿದವರು ಮತ್ತು ಪತ್ರಿಕೆಗೆ ಬೆಂಬಲವಾಗಿ ನಿಂತು ಆಜೀವ ಸದಸ್ಯತ್ವ ಪಡೆದು ಸಹಕಾರ ನೀಡಿದ್ದಾರೆ. ಅವರ ಈ ಅಪೂರ್ವ ಪ್ರೋತ್ಸಾಹವನ್ನು ಸದಾ ಸ್ಮರಿಸುತ್ತಾ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ.



### ಡಾ. ಶ್ರೇಯಾ (ದಂತ ವೈದ್ಯರು)

ಪುಸ್ತಕ ಪೋಷಕ ಯೋಜನೆಗೆ ವಿದ್ಯಾಭಿಮಾನಿ ಯಾದ ಡಾ. ಶ್ರೇಯಾ ಅವರು ಅಶಕ್ತ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸುವ ದೂರದೃಷ್ಟಿಯಿಂದ ಆರ್ಥಿಕವಾಗಿ ಸಹಾಯ ಒದಗಿಸಿದ್ದಾರೆ. ಅವರ ಪುಸ್ತಕ ಪ್ರೀತಿ ಮತ್ತು ಶಿಕ್ಷಣದ ಮೇಲಿನ ಅಭಿಮಾನಕ್ಕೆ ನಾವೆಲ್ಲ ಆಭಾರಿಯಾಗಿದ್ದೇವೆ. ದೇವರು ಅವರಿಗೆ ಇನ್ನೂ ಹೆಚ್ಚು ಸಹಾಯ ಒದಗಿಸುವ ಶಕ್ತಿ ಕರುಣಿಸಲಿ ಎಂದು ಹಾರೈಸುತ್ತೇವೆ. ಧನ್ಯವಾದಗಳೊಂದಿಗೆ,

### ಕಾವ್ಯಶ್ರೀ ಕೆ.ಆರ್

ಕುಮಾರಿ ಕಾವ್ಯಶ್ರೀ ಇವರು ಕಾರ್ಕಳ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಶೈಕ್ಷಣಿಕ ಸಹಭಾಗಿತ್ವದ ಹೆಚ್.ಕೆ.ಎಸ್ ಪ.ಪೂ ಕಾಲೇಜಿನ ಹಳೆ ವಿದ್ಯಾರ್ಥಿನಿಯಾಗಿದ್ದಾರೆ. ತಾನು ಶಿಕ್ಷಣ ಪಡೆದ ಸಂಸ್ಥೆಗೆ ತನ್ನಿಂದಾದ ಸಹಾಯ ಒದಗಿಸಬೇಕೆಂಬ ಆಸೆಯಿಂದ ಕ್ರಿಯೇಟಿವ್ ಪುಸ್ತಕ ಪೋಷಕ ಯೋಜನೆಗೆ ಸಹಾಯ ಹಸ್ತ ನೀಡಿರುತ್ತಾರೆ. ಪ್ರಸ್ತುತ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ ದ್ವಿತೀಯ ಸೆಮಿಸ್ಟರ್ ವ್ಯಾಸಂಗ ಮಾಡುತ್ತಿದ್ದಾರೆ. ನಮ್ಮ ಸಂಸ್ಥೆಯ ಹೆಮ್ಮೆಯ ವಿದ್ಯಾರ್ಥಿನಿಯಾದ ಕಾವ್ಯಶ್ರೀಯವರಿಗೆ ನಮ್ಮೊಂದಿಗೆ ವಿದ್ಯಾದಾನದ ಕೈಂಕರ್ಯದಲ್ಲಿ ತೊಡಗಿಸಿಕೊಂಡು ಬೆಂಬಲ ನೀಡಿರುವುದಕ್ಕೆ ಸಂಸ್ಥೆ ಅಭಿನಂದಿಸಿ, ಮುಂದಿನ ಜೀವನಕ್ಕೆ ಶುಭ ಹಾರೈಸುತ್ತಿದ್ದೇವೆ.





### ಶ್ರೀ ರವಿಬಾಬು ಮತ್ತು ಶ್ರೀಮತಿ ವಾಹಿನಿ ರವಿಬಾಬು

ಪ್ರಥಮ ಪಿಯುಸಿ ವಾಣಿಜ್ಯ ವಿಭಾಗದ ಹಾರಿಕ ಇವರ ಪಾಲಕರಾದ ಶ್ರೀ ರವಿಬಾಬು ಮತ್ತು ಶ್ರೀಮತಿ ವಾಹಿನಿ ರವಿಬಾಬು ಇವರು ನಮ್ಮ ಸಂಸ್ಥೆಯ ಬಡವಿದ್ಯಾರ್ಥಿಗಳ ಆಶಾಕಿರಣವಾಗಿರುವ 'ಕ್ರಿಯೇಟಿವ್ ಹೊಂಗಿರಣ' ವಿದ್ಯಾದಾನದ ಸೇವೆಗೆ ರೂ. ಒಂದು ಲಕ್ಷವನ್ನು ನೀಡಿರುತ್ತಾರೆ. ಶ್ರೀಯುತ ಬಾಬು ಮತ್ತು ಶ್ರೀಮತಿ ವಾಹಿನಿಯವರು ಸಮಾಜದ ಬಡಮಕ್ಕಳ ಶಿಕ್ಷಣ ಕುರಿತಾಗಿ ವಿದ್ಯಾಭಿಮಾನಿಗಳಾಗಿ ನಮ್ಮೊಂದಿಗೆ ಸ್ಪಂದಿಸಿದ್ದಾರೆ. ಗೌರವಾನ್ವಿತರಿಗೆ ನಮ್ಮ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ. ತಮ್ಮ ಸಹಾಯ ಸಹಕಾರಗಳು ನಮ್ಮೊಂದಿಗೆ ಇನ್ನೂ ಮುಂದೆಯೂ ನಿರಂತರವಾಗಿರಲಿ ಎಂದು ಕೇಳಿಕೊಳ್ಳುತ್ತೇವೆ.
ಧನ್ಯವಾದಗಳೊಂದಿಗೆ,

## ಬೇಲೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಹೆಚ್. ಕೆ. ಸುರೇಶ್‌ರವರಿಗೆ ಹೆಚ್.ಕೆ.ಎಸ್. ಪಿ.ಯು ಕಾಲೇಜಿನ ವತಿಯಿಂದ ಅಭಿನಂದನಾ ಸಮಾರಂಭ

ಹಾಸನ: ಬೇಲೂರು ಲೋಕಸಭಾ ಕ್ಷೇತ್ರದ ಶಾಸಕರು ಮತ್ತು ಹೆಚ್.ಕೆ.ಎಸ್. ಸಮೂಹ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಕೆ. ಸುರೇಶ್‌ರವರಿಗೆ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಕಾರ್ಕಳ ಮತ್ತು ಹೆಚ್.ಕೆ.ಎಸ್. ಪಿ.ಯು ಕಾಲೇಜಿನ ವತಿಯಿಂದ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹ ಸಂಸ್ಥಾಪಕರಾದ ಅಶ್ವತ್.ಎಸ್.ಎಲ್. ರವರು ಶಾಸಕರ ಜನಪರ ಕಾಳಜಿಯ ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾ ಲಾಕ್‌ಡೌನ್‌ನಂತಹ ಪರಿಸ್ಥಿತಿಯಲ್ಲೂ ಅವರು ಹಮ್ಮಿಕೊಂಡ ಹಲವಾರು ಕಾರ್ಯಗಳ ಬಗ್ಗೆ ಅಭಿಮಾನ ವ್ಯಕ್ತಪಡಿಸಿದರು. ಅಭಿನಂದನೆಯನ್ನು ಸ್ವೀಕರಿಸಿದ ಹೆಚ್.ಕೆ. ಸುರೇಶ್‌ರವರು ಮಾತನಾಡುತ್ತಾ ಶುದ್ಧ ಹಾಗೂ ಭ್ರಷ್ಟಾಚಾರ ರಹಿತವಾದ ಸೇವೆಯೊಂದಿಗೆ ಬೇಲೂರು ಕ್ಷೇತ್ರದ ಸಮಗ್ರ ಅಭಿವೃದ್ಧಿ ತನ್ನ ಧ್ಯೇಯ ಎಂದು ತಿಳಿಸಿದರು. ಕರಾವಳಿಯ ಹೆಸರಾಂತ ಶಿಕ್ಷಣ ಸಂಸ್ಥೆ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನವನ್ನು ಹಾಸನಕ್ಕೆ ಪರಿಚಯಿಸಿದುದಕ್ಕಾಗಿ ಸಂತಸಪಡುತ್ತಾ ಹಾಸನ ಜಿಲ್ಲೆಗೆ ಹೆಮ್ಮೆ ತರುವಂತಹ ಫಲಿತಾಂಶವನ್ನು ಹೆಚ್.ಕೆ.ಎಸ್. ಪಿ.ಯು ಕಾಲೇಜ್ ಪಡೆಯುತ್ತಿದ್ದು ಮುಂಬರುವ ದಿನಗಳಲ್ಲಿ ಇನ್ನಷ್ಟು ಅದ್ಭುತ ಫಲಿತಾಂಶಗಳು ಕಾಲೇಜಿನಿಂದ ಮೂಡಿಬರಲಿ ಎಂದು ಆಶಿಸಿದರು. ಈ ಅಭಿನಂದನಾ ಕಾರ್ಯಕ್ರಮ ಮನಸ್ಸಿಗೆ ಬಹಳ ಸಂತಸ ಪಡಿಸಿದೆ ಎಂದು ತಿಳಿಸಿದರು. ಹೆಚ್.ಕೆ.ಎಸ್. ಪಿಯು ಕಾಲೇಜಿನ ಪ್ರಾಂಶುಪಾಲರಾದ ವಿಮಲ್ ರಾಜ್ ರವರು ಮಾತನಾಡುತ್ತಾ ಶಾಸಕರ ಉದಾತ್ತ ಚಿಂತನೆ ಆದರ್ಶ ನಾಯಕತ್ವದ ಕುರಿತು ಮಾತನಾಡುತ್ತಾ ಶಿಕ್ಷಣದ ಕುರಿತಾಗಿ ಸುರೇಶ್‌ರವರಿಗೆ ಇರುವ ಆಸ್ಥೆ ಮತ್ತು ವಿಶಾಲ ದೃಷ್ಟಿಕೋನದ ಕುರಿತಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಸಭಾಧ್ಯಕ್ಷತೆಯ ನೆಲೆಯಲ್ಲಿ ಮಾತನಾಡಿದ ಶಾಸಕರ ಧರ್ಮಪತ್ನಿ ಮತ್ತು ಹೆಚ್.ಕೆ.ಎಸ್. ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಕೋಮಲಾ ಸುರೇಶ್‌ರವರು ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದುದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತಾ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕಾಗಿ ಶುಭವನ್ನು ಹಾರೈಸಿದರು. ಕಾರ್ಯಕ್ರಮದಲ್ಲಿ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹ ಸಂಸ್ಥಾಪಕರಾದ ಗಣಪತಿ ಕೆ. ಎಸ್. ಮತ್ತು ಅಮೃತ್ ರೈ, ಹೆಚ್.ಕೆ.ಎಸ್. ಸಮೂಹ ಶಿಕ್ಷಣ ಸಂಸ್ಥೆಗಳ ಸದಸ್ಯರಾದ ಯಶ್ವಂತ್. ಹೆಚ್.ಎಸ್ ಮತ್ತು ಉಪ ಪ್ರಾಂಶುಪಾಲರುಗಳಾದ ಪ್ರವೀಣ್. ಎ ಮತ್ತು ಆದಿತ್ಯ ವಟಿ ಕೆ. ಉಪಸ್ಥಿತರಿದ್ದರು.




## ಹೆಚ್. ಕೆ. ಎಸ್. ಕಾಲೇಜಿನಲ್ಲಿ ಕಲಾರಂಗ್ ಕಾರ್ಯಕ್ರಮ




**ಹಾಸನ:** ಹೆಚ್. ಕೆ. ಎಸ್. ಪಿ.ಯು ಕಾಲೇಜ್ ಹಾಸನದಲ್ಲಿ **'ಕಲಾರಂಗ್'** ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು.

ಅತಿಥಿಯಾಗಿ ಆಗಮಿಸಿದ ಎಚ್.ಕೆ.ಎಸ್ ಇಂಟರ್ನ್ಯಾಷನಲ್ ಸ್ಕೂಲ್‌ನ ಪ್ರಾಂಶುಪಾಲರಾದ ಡಾ. ಶಿವಕುಮಾರ್ ಎಸ್. ವಿದ್ಯಾರ್ಥಿಗಳಲ್ಲಿ ಸಂಸ್ಕಾರ ತುಂಬಲು ಸಾಂಸ್ಕೃತಿಕ ಕಾರ್ಯಕ್ರಮಗಳ ಅನಿವಾರ್ಯತೆಯನ್ನು ತಿಳಿ ಹೇಳಿದರು. ಕಾಲೇಜಿನ ಪ್ರಾಂಶುಪಾಲರಾದ ವಿಮಲ್ ರಾಜ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾಲೇಜಿನ ಶೈಕ್ಷಣಿಕ ಉಪ ಪ್ರಾಂಶುಪಾಲರಾದ ಆದಿತ್ಯ ವಟಿ .ಕೆ. ಸ್ವಾಗತವನ್ನು ಕೋರಿ, ಆಡಳಿತಾತ್ಮಕ ಉಪ ಪ್ರಾಂಶುಪಾಲರಾದ ಪ್ರವೀಣ್ ಎ. ವಂದಿಸಿದರು.




**ಕಾವ್ಯೋಕ್ತಿ**

ಶಬ್ದಹೀನ ಅರ್ಥಗಳಿವೆಯೆಂದರೆ ಅವು ಸತ್ತವರ ನೆರಳುಗಳು.
– ಹೆಚ್.ಎಸ್. ವೆಂಕಟೇಶಮೂರ್ತಿ



## ಶ್ರೀ ಕೃಷ್ಣ ಜನ್ಮಾಷ್ಟಮಿ ಮತ್ತು ಮೊಸರು ಕುಡಿಕೆ ಆಚರಣೆ



**ಉಡುಪಿ:** ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಕೊರಂಗ್ರಪಾಡಿಯ ಹುಲಿವೇಷ ತಂಡದವರು ಹುಲಿ ಕುಣಿತವನ್ನು ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಅಂಗಸಂಸ್ಥೆಯಾದ ತ್ರಿಶಾ ಪ.ಪೂ ಕಾಲೇಜು, ಉಡುಪಿಯಲ್ಲಿ ನಡೆಸಿಕೊಟ್ಟರು. ಹುಲಿ ಕುಣಿತದ ಹಿನ್ನೆಲೆ ಮತ್ತು ಮಹತ್ವವನ್ನು ಕನ್ನಡ ಉಪನ್ಯಾಸಕರಾದ ಸಂತೋಷ್‌ರವರು ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮೊಸರು ಕುಡಿಕೆ ಕಾರ್ಯಕ್ರಮ ನಡೆಸಲಾಯಿತು.

## ಸಿ.ಎಸ್.ಇ.ಇ.ಟಿ ಮಾಹಿತಿ ಕಾರ್ಯಗಾರ



**ಕಾರ್ಕಳ:** ಕ್ರಿಯೇಟಿವ್ ಪಿಯು ಕಾಲೇಜಿನ ವಾಣಿಜ್ಯ ವಿದ್ಯಾರ್ಥಿಗಳಿಗಾಗಿ ಸಿ.ಎಸ್.ಇ.ಇ.ಟಿ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಸಿ.ಎಸ್.ಇ.ಇ.ಟಿ ಬಗ್ಗೆ ಖ್ಯಾತ ಕಂಪೆನಿ ಸೆಕ್ರೇಟರಿ ಸಂತೋಷ ಪ್ರಭು ವಿದ್ಯಾರ್ಥಿಗಳಿಗೆ ಕಂಪೆನಿ ಸೆಕ್ರೇಟರಿಯ ಕಾರ್ಯವೈಖರಿ ಹಾಗೂ ಅಗತ್ಯತೆಗಳ ಬಗ್ಗೆ ವಿವರಿಸಿದರು. ಸಂಸ್ಥೆಯ ಸಂಸ್ಥಾಪಕರದ ಅಶ್ವತ್ ಎಸ್.ಎಲ್ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಮಹತ್ವವನ್ನು ನೀಡಿ ಶುಭ ಹಾರೈಸಿದರು.

## NSS ಘಟಕದ ವತಿಯಿಂದ "ಪಂಚಪ್ರಾಣ್ ಪ್ರತಿಜ್ಞಾವಿಧಿ" ಕಾರ್ಯಕ್ರಮ



**ಕಾರ್ಕಳ:** ಕ್ರಿಯೇಟಿವ್ ಪದವಿ ಪೂರ್ವ ಕಾಲೇಜು ಕಾರ್ಕಳ ಇದರ ಎನ್.ಎಸ್.ಎಸ್ ಘಟಕದ ವತಿಯಿಂದ ವಿದ್ಯಾರ್ಥಿಗಳಿಗೆ "PANCHAPRAN PLEGDE" ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ದೇಶದ ಅಭಿವೃದ್ಧಿಯಲ್ಲಿ ತನ್ನನ್ನು ತಾನು ಸಕ್ರೀಯವಾಗಿ ತೊಡಗಿಸಿಕೊಂಡು, ವಸಾಹತುಶಾಹಿ ಮನಸ್ಥಿತಿಯನ್ನು ಸಂಪೂರ್ಣ ತೊಡೆದು ಹಾಕುವುದರೊಂದಿಗೆ ನಮ್ಮ ಶ್ರೀಮಂತ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ದೇಶದ ಏಕತೆ ಮತ್ತು ಒಗ್ಗಟ್ಟಿಗೆ ಶ್ರಮಿಸುವುದರೊಂದಿಗೆ ದೇಶಕ್ಕಾಗಿ ಬಲಿದಾನಗೈದ ವೀರಯೋಧರಿಗೆ ಗೌರವ ಸಲ್ಲಿಸುತ್ತಾ ದೇಶ ರಕ್ಷಣೆ ಹಾಗೂ ಪ್ರಗತಿಗೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸಿ ವಿದ್ಯಾರ್ಥಿಗಳಿಗೆ ಪ್ರಮಾಣವಚನ ಬೋಧಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್, ಎನ್.ಎಸ್.ಎಸ್ ಯೋಜನಾಧಿಕಾರಿಯಾದ ಉಮೇಶ್ ಹಾಗೂ ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು.

## ಜೆ.ಇ.ಇ (ಬಿ.ಆರ್ಕ್ ) ಪ್ರವೇಶ ಪರೀಕ್ಷೆಯಲ್ಲಿ ಹೆಚ್. ಕೆ. ಎಸ್.ನ ಸುಮುಖ್ ಶೆಟ್ಟಿ ಸಾಧನೆ



ಸುಮುಖ್ ಶೆಟ್ಟಿ

**ಹಾಸನ:** ಜೆ.ಇ.ಇ (ಬಿ.ಆರ್ಕ್) ವಿದ್ಯಾರ್ಥಿಗಳಿಗೆ ಏಪ್ರಿಲ್‌ನಲ್ಲಿ ನಡೆಸಲಾದ ಪ್ರವೇಶ ಪರೀಕ್ಷೆಯಲ್ಲಿ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಶೈಕ್ಷಣಿಕ ಸಹಭಾಗಿತ್ವದ ಹೆಚ್. ಕೆ. ಎಸ್ ಪಿ.ಯು ಕಾಲೇಜಿನ ವಿದ್ಯಾರ್ಥಿ ಕ್ರಿಯೇಟಿವ್ ಲರ್ನಿಂಗ್ ಕ್ಲಾಸಸ್'ನ ಅಡಿಯಲ್ಲಿ ತರಬೇತಿಯನ್ನು ಪಡೆದು ಪ್ರಥಮ ಪ್ರಯತ್ನದಲ್ಲೇ ಈ ಅದ್ಭುತ ಸಾಧನೆಗೈದಿದ್ದಾರೆ .

ಪ್ರಸ್ತುತ ಬಹುಬೇಡಿಕೆಯನ್ನು ಹೊಂದಿರುವ ರಾಷ್ಟ್ರದ ಅತ್ಯುನ್ನತ ಸಂಸ್ಥೆಯಾದ ಐ.ಐ.ಟಿ ಗೆ ಸೇರಲು ನಡೆಯುವ ಈ ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆಗೆ ಹೆಚ್.ಕೆ.ಎಸ್ ವಿದ್ಯಾ ಸಂಸ್ಥೆಯಲ್ಲಿ ಅತ್ಯುತ್ತಮ ತರಬೇತಿ ನೀಡಲಾಗುತ್ತಿದ್ದು, ಇದು ಎಇಇ (ಃ.ಂಡಿಛಿ)ಗೆ ತರಬೇತಿ ನೀಡುತ್ತಿರುವ ಹಾಸನ ಜಿಲ್ಲೆಯ ಏಕೈಕ ಸಂಸ್ಥೆಯಾಗಿದೆ.

ತಮ್ಮ ಮೊದಲ ಪ್ರಯತ್ನದಲ್ಲೇ ದೇಶಮಟ್ಟದಲ್ಲಿ ಸುಮುಖ್ ಶೆಟ್ಟಿಯವರು 608 ನೇ ರ‍್ಯಾಂಕ್ ಪಡೆದಿದ್ದು ಸಾಧಕರನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಕೆ. ಸುರೇಶ್, ಹೆಚ್. ಎಸ್.ಪ್ರಶಾಂತ್ ಗೌಡ, ಆಡಳಿತ ಮಂಡಳಿ, ಪ್ರಾಂಶುಪಾಲರು, ಸಂಯೋಜಕರಾದ ರಕ್ಷಿತ್ ಬಿ. ಎಸ್ ಅಭಿನಂದಿಸಿದರು. ಕಳೆದ ಬಾರಿಯೂ ಹೆಚ್.ಕೆ.ಎಸ್ ವಿದ್ಯಾರ್ಥಿ ಅಂಕಿತ್ ವಿ. ಎಮ್. ರಾಷ್ಟ್ರಮಟ್ಟದಲ್ಲಿ 778 ನೇ ರ‍್ಯಾಂಕ್ ಪಡೆದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

## ತಂಬಾಕು ಮುಕ್ತ ಭಾರತ ಅಭಿಯಾನ



**ಉಡುಪಿ:** ತಂಬಾಕು ಸೇವನೆ ವ್ಯಕ್ತಿಯ ಜೀವನವನ್ನು ಮಾತ್ರವಲ್ಲ ಆತನ ಸಂಸಾರವು ವಿನಾಶದ ಅಂಚಿಗೆ ದೂಡುವುದರಲ್ಲಿ ಯಾವುದೇ ಸಂಶಯವಿಲ್ಲ. ಮಾದಕ ವ್ಯಸನದಿಂದ ಯುವ ಪೀಳಿಗೆ ದೂರವಿರಬೇಕು ಎಂದು ಇಂಗ್ಲೀಷ್ ಉಪನ್ಯಾಸಕರಾದ ಸೀಸರ್ ಮಾಹಿತಿ ನೀಡಿದರು.

ಈ ಕಾರ್ಯಗಾರದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಸ್ಟ್ಯಾನಿ ಲೋಬೋರವರು ಉಪನ್ಯಾಸಕ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಹೆಚ್. ಕೆ. ಎಸ್. ಪದವಿ ಪೂರ್ವ ಕಾಲೇಜಿನ 'ಇಂಚರ ಪಟೇಲ್' ಪ್ರಥಮ.



**ಹಾಸನ:** ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಹಾಸನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಸನ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಮಧ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಸನ. ಇವರ ಸಹಯೋಗದೊಂದಿಗೆ ಡಾ॥ ಮಹಾಂತ ಶಿವಯೋಗಿ ಸ್ವಾಮಿಗಳ ಜನ್ಮ ದಿನಾಚರಣೆ ಪ್ರಯುಕ್ತ ಆಚರಿಸಲಾದ "ವ್ಯಸನ ಮುಕ್ತ ದಿನಾಚರಣೆ 2023" ರ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಹೆಚ್ .ಕೆ. ಎಸ್. ಪದವಿ ಪೂರ್ವ ಕಾಲೇಜಿನ 'ಇಂಚರ ಪಟೇಲ್' ಇವರು ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಇವರು ಸಕಲೇಶಪುರ ತಾಲೂಕಿನ ಹಾನುಬಾಳು ಗ್ರಾಮದ ಕಿರಣ್ ಕುಮಾರ್ ಮತ್ತು ಕವಿತಾ ಎನ್. ಡಿ . ಯವರ ಪುತ್ರಿ.

ಸಾಧಕರನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಕೆ.ಸುರೇಶ್, ಕಾರ್ಯದರ್ಶಿಗಳಾದ ಹೆಚ್. ಎಸ್.ಪ್ರಶಾಂತ್ ಗೌಡ, ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

## ಸಿಎ ತರಗತಿಗಳ ಆರಂಭ ಮತ್ತು ಮಾಹಿತಿ ಕಾರ್ಯಗಾರ ಕಾರ್ಯಕ್ರಮ




**ಹಾಸನ:** ಸಿ.ಎ ಮಾಹಿತಿ ಕಾರ್ಯಗಾರದಲ್ಲಿ ಸಿ.ಎ. ರಾಜವರ್ಧನ್ ಅವರು ಆಧುನಿಕ ಜಗತ್ತಿನಲ್ಲಿ ಚಾರ್ಟೆಡ್ ಅಕೌಂಟೆಂಟ್‌ಗೆ ಇರುವ ಮಹತ್ವವನ್ನು ಸವಿವರವಾಗಿ ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಸಿ ಮಾತನಾಡಿದ ಪ್ರಾಂಶುಪಾಲರಾದ ವಿಮಲ್ ರಾಜ್ ಜಿ. ಈ ತರಗತಿಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸೂಚನೆಯಿತ್ತರು.

## RIECEE ಹೆಚ್. ಕೆ. ಎಸ್‌ನ ಸುಪ್ರಸಿದ್ಧ್ ಕಾಂತ್ ರಾಜ್ಯಕ್ಕೆ ಪ್ರಥಮ.



ಸುಪ್ರಸಿದ್ಧ್ ಕಾಂತ್



ನಿಹಾರಿಕ ಎಂ.ವಿ



ಸುಭಾಷ್ ಪೈ



ಕುಶಾಲ್.ಡಿ

**ಹಾಸನ:** ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್ ಗೆ ಸೇರ ಬಯಸುವ ವಿದ್ಯಾರ್ಥಿಗಳಿಗೆ ಜುಲೈ 2 ರಂದು ನಡೆದ ಪ್ರವೇಶ ಪರೀಕ್ಷೆಯಲ್ಲಿ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಶೈಕ್ಷಣಿಕ ಸಹಭಾಗಿತ್ವದ ಹೆಚ್. ಕೆ. ಎಸ್. ಪಿ.ಯು ಕಾಲೇಜಿನ ವಿದ್ಯಾರ್ಥಿಗಳು ಕ್ರಿಯೇಟಿವ್ ಲರ್ನಿಂಗ್ ಕ್ಲಾಸಸ್'ನ ಅಡಿಯಲ್ಲಿ ತರಬೇತಿಯನ್ನು ಪಡೆದು ಪ್ರಥಮ ಪ್ರಯತ್ನದಲ್ಲೇ ಅದ್ಭುತ ಸಾಧನೆ ಗೈದಿದ್ದಾರೆ .

ರಾಷ್ಟ್ರಾದ್ಯಂತ ಕೇವಲ ಐದು ಶಿಕ್ಷಣ ಸಂಸ್ಥೆಯನ್ನು ಹೊಂದಿರುವ RIE (Regional Institute of Education) ನಡೆಸುವ ರಾಷ್ಟ್ರಮಟ್ಟದ ಎನ್. ಸಿ. ಇ . ಆರ್.ಟಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಹೆಚ್.ಕೆ.ಎಸ್‌ನ ಮೂವರು ವಿದ್ಯಾರ್ಥಿಗಳು ಅದ್ಭುತ ಫಲಿತಾಂಶದೊಂದಿಗೆ ಪ್ರವೇಶ ಪಡೆದಿದ್ದಾರೆ.

ತಮ್ಮ ಮೊದಲ ಪ್ರಯತ್ನದಲ್ಲೇ ವಿದ್ಯಾರ್ಥಿಗಳಾದ ಸುಪ್ರಸಿದ್ಧ್ ಕಾಂತ್ (CAT ರ‍್ಯಾಂಕ್ 1, ಸಾಮಾನ್ಯ ರ‍್ಯಾಂಕ್ 2), ನಿಹಾರಿಕ ಎಂ.ವಿ (6ನೇ ರ‍್ಯಾಂಕ್), ಸುಭಾಷ್ ಪೈ (12ನೇ ರ‍್ಯಾಂಕ್), ಕುಶಾಲ್.ಡಿ (16ನೇ ರ‍್ಯಾಂಕ್) ದೇಶಮಟ್ಟದಲ್ಲಿ ರ‍್ಯಾಂಕ್ ಪಡೆದಿದ್ದು ಸಾಧಕರನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಕೆ.ಸುರೇಶ್, ಕಾರ್ಯದರ್ಶಿಗಳು, ಆಡಳಿತ ಮಂಡಳಿ, ಪ್ರಾಂಶುಪಾಲರು, ಸಂಯೋಜಕರು ಅಭಿನಂದಿಸಿದ್ದಾರೆ.

## ಸಿ.ಎ ಮಾಹಿತಿ ಕಾರ್ಯಗಾರ



**ಕಾರ್ಕಳ:** ಕ್ರಿಯೇಟಿವ್ ಪಿಯು ಕಾಲೇಜಿನ ವಾಣಿಜ್ಯ ವಿದ್ಯಾರ್ಥಿಗಳಿಗೆ ಸಿ.ಎ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಸಿ.ಎ ಕಾರ್ಯಗಾರದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊಫೆಸರ್ ರಾಜ್ ಗಣೇಶ್ ಕಾಮತ್ ಆಗಮಿಸಿ, ಪ್ರಸ್ತುತ ವಿದ್ಯಮಾನದಲ್ಲಿ ಚಾರ್ಟರ್ಡ್ ಅಕೌಂಟ್ ಕೋರ್ಸ್ ಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಫುಲ ಅವಕಾಶಗಳಿದ್ದು ವಿದ್ಯಾರ್ಥಿಗಳು ಕಾಲೇಜುನಲ್ಲಿ ಒದಗಿಸುವ ಈ ಕೋರ್ಸ್ ನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದರು. ಸಂಸ್ಥೆಯ ಸಂಸ್ಥಾಪಕರದ ಗಣಪತಿ ಭಟ್ ಕೆ.ಎಸ್ ವಿದ್ಯಾರ್ಥಿಗಳಿಗೆ ಕೋರ್ಸ್ ನ ಮಹತ್ವವನ್ನು ನೀಡಿ ಶುಭ ಹಾರೈಸಿದರು.

ಕಾವ್ಯೋಕ್ತಿ

ಕಾಣದ ವೀಣೆಯ ಕನಸಿನೇಣಿಯಲಿ ಮೆಲ್ಲಗೆ ದನಿಯೊಂದುರುಳುತಿದೆ... ಚಂದ್ರನಿಗಿಂತಲು ತಣ್ಣಗಿದೆ!
– ಕೆ.ಎಸ್. ನರಸಿಂಹ ಸ್ವಾಮಿ



## ಯೋಗಾಭ್ಯಾಸದಿಂದ ಸುದೃಢ ದೇಹ ಮತ್ತು ಆತ್ಮವಿಶ್ವಾಸ ಹೆಚ್ಚುತ್ತದೆ.



**ಕಾರ್ಕಳ:** ಪ್ರತಿನಿತ್ಯ ಯೋಗ ಮತ್ತು ಸೂರ್ಯ ನಮಸ್ಕಾರಗಳನ್ನು ಮಾಡುವುದರಿಂದ ಶರೀರ ಮತ್ತು ಮನಸ್ಸು ಪ್ರಫುಲ್ಲಗೊಳ್ಳುವುದರ ಜೊತೆಗೆ ಆತ್ಮವಿಶ್ವಾಸ, ಏಕಾಗ್ರತೆ ಹೆಚ್ಚುತ್ತದೆ. ಇದರಿಂದ ಸ್ವಸ್ಥ ಮನಸ್ಸು, ಸುಂದರ ಬದುಕು, ರೋಗ ರಹಿತ ಜೀವನ ನಡೆಸಬಹುದಾಗಿದೆ ಎಂದು ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ವಿದ್ಯಾರ್ಥಿಗಳಿಗೆ ತಿಳಿಸಿದರು. ಅವರು ಕ್ರಿಯೇಟಿವ್ ಪಿ ಯು ಕಾಲೇಜಿನಲ್ಲಿ ನಡೆದ ವಿಶ್ವ ಯೋಗ ದಿನದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಜೂನ್ 21 ನ್ನು ಅಂತರರಾಷ್ಟ್ರೀಯ ಯೋಗದಿನವನ್ನಾಗಿ ಆಚರಿಸುವ ಮೂಲಕ ಇಡೀ ಜಗತ್ತೇ ಯೋಗವನ್ನು ಒಪ್ಪಿಕೊಂಡಿದೆ. ಇದರಿಂದ ಆರೋಗ್ಯಪೂರ್ಣ ವ್ಯಕ್ತಿತ್ವದೊಂದಿಗೆ, ವ್ಯಕ್ತಿಯ ವೈಯಕ್ತಿಕ ರೋಗ ಮುಕ್ತಿಯೂ ಆಗುವುದರಿಂದ ಎಲ್ಲರೂ ಯೋಗವನ್ನು ಪ್ರತಿದಿನ ಮಾಡುವಂತಾಗಬೇಕು ಎಂದು ಸಂಸ್ಥಾಪಕರಾದ ಅಶ್ವತ್.ಎಸ್. ಎಲ್ ಕರೆ ನೀಡಿದರು.

ಈ ಸಂದರ್ಭದಲ್ಲಿ ಕ್ರಿಯೇಟಿವ್ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿ ನಿಲಯ ಪಾಲಕರು, ಉಪನ್ಯಾಸಕೇತರ ವರ್ಗದವರು ಯೋಗ ದಿನದಲ್ಲಿ ಪಾಲ್ಗೊಂಡರು.

## ತ್ರಿಶಾ ಪದವಿಪೂರ್ವ ಕಾಲೇಜು ಉಡುಪಿಯಲ್ಲಿ 'ಗುರುದೇವೋಭವ'



**ಉಡುಪಿ:** ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ರವರ ಜನ್ಮದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಕ್ರಿಯೇಟಿವ್ ಗುರು ದೇವೋಭವ ಕಾರ್ಯಕ್ರಮವನ್ನು ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಅಂಗಸಂಸ್ಥೆಯಾದ ತ್ರಿಶಾ ಪದವಿಪೂರ್ವ ಕಾಲೇಜು, ಕಲ್ಯಾಣಪುರ ಉಡುಪಿಯಲ್ಲಿ ಆಚರಿಸಲಾಯಿತು.

ಸಂಸ್ಥೆಯ ಸಂಸ್ಥಾಪಕರಲ್ಲಿ ಓರ್ವರಾದ ಡಾ. ಗಣನಾಥ ಶೆಟ್ಟಿಯವರು ಪ್ರಾಸ್ತಾವಿಕವಾಗಿ ಮಾತುಗಳನ್ನಾಡುತ್ತಾ, "ಶಿಕ್ಷಕ ವೃತ್ತಿ ಪವಿತ್ರವಾದದ್ದು. ನವಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ವಿದ್ಯಾರ್ಥಿಗಳನ್ನು ತಿದ್ದಿ ತೀಡಿ ಸಮಾಜಕ್ಕೆ ನೀಡುವಲ್ಲಿ ಶಿಕ್ಷಕರು ತಮ್ಮ ಸರ್ವಸ್ವವನ್ನು ತ್ಯಾಗ ಮಾಡುತ್ತಾರೆ" ಎಂದು ನುಡಿದರು. ಈ ಪ್ರಯುಕ್ತ ಉಡುಪಿ ಕಲ್ಯಾಣಪುರದ ಡಾ. ಟಿ. ಎಂ. ಎ. ಪೈ. ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಶ್ರೀ ಶೇಖರ್ ಪಿ., ಬ್ರಹ್ಮಾವರ ಜಿ.ಎಮ್ . ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಶ್ರೀ ಜಾರ್ಜ್ ಕುರಿಯನ್, ಹಟ್ಟಿಯಂಗಡಿ ಶ್ರೀ ಸಿದ್ಧಿ ವಿನಾಯಕ ಶಿಕ್ಷಣ ಪ್ರತಿಷ್ಠಾನದ ಪ್ರಾಂಶುಪಾಲ ಶರಣ್ ಕುಮಾರ್ ಹಾಗೂ ತ್ರಿಶ ಪದವಿಪೂರ್ವ ಕಾಲೇಜಿನ ಹಿಂದಿ ಉಪನ್ಯಾಸಕರಾದ ಶ್ರೀ ಸುಧಾಕರ್ ಐಡಿ ಅವರನ್ನು ಸನ್ಮಾನಿಸಲಾಯಿತು. ಬಳಿಕ ಕಾಲೇಜಿನ ಉಪನ್ಯಾಸಕ ವೃಂದದವರಿಗೆ ಗೌರವವನ್ನು ಸಲ್ಲಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಂಸ್ಥಾಪಕರಲ್ಲಿ ಓರ್ವರಾದ ಅಮೃತ ರೈ ಅವರು ಮಾತನಾಡಿ "ವಿದ್ಯಾರ್ಥಿಗಳು ಜೀವನ ಪರ್ಯಂತ ತನ್ನ ಜೀವನೋಪಾಯಕ್ಕೆ ಮಾರ್ಗದರ್ಶನವನ್ನು ನೀಡಿರುವ, ಸಮಾಜದಲ್ಲಿ ತನ್ನನ್ನು ಉತ್ತಮ ವ್ಯಕ್ತಿಯನ್ನಾಗಿ ರೂಪಿಸಿದ ಗುರುವನ್ನು ಎಂದಿಗೂ ಮರೆಯಬಾರದು. ಬಾಗುವುದು ನಮ್ರತನವಾಗಬೇಕೆ ಹೊರತು ಬೀಗುವುದರಿಂದ ನಮಗೇನು ಸಿಗಲಾರದು"ಎಂದು ವಿದ್ಯಾರ್ಥಿಗಳಿಗೆ ಹಿತವಚನವನ್ನು ನೀಡಿದರು.

ಸಂಸ್ಥೆಯ ಪ್ರಾಂಶುಪಾಲರಾದ ಸ್ಟ್ಯಾನಿ ಲೋಬೋ ಸ್ವಾಗತಿಸಿ, ವಿದ್ಯಾರ್ಥಿಗಳಾದ ದೀಕ್ಷಿತ ನಿರೂಪಿಸಿ, ಮುಕ್ತ, ಹಿತೈಷಿಣಿ, ಶಶಾಂಕ್, ಸತೀಶ್ ಸನ್ಮಾನ ಪತ್ರವನ್ನು ವಾಚಿಸಿ, ಯುವರಾಜ್ ಬಿಕೆ ವಂದಿಸಿದರು.

## ಸಂಸ್ಕೃತಾಭ್ಯಾಸದಿಂದ ಸಂಸ್ಕೃತಿಯ ಪುನರುತ್ಥಾನ ಸಾಧ್ಯ

–ವಿದ್ವಾನ್ ಗಣಪತಿ ಭಟ್



**ಹಾಸನ:** ಹಾಸನದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಹೆಚ್.ಕೆ.ಎಸ್ ಪಿ.ಯು ಕಾಲೇಜ್ ಹಾಸನ ಇಲ್ಲಿ ವಿಶ್ವ ಸಂಸ್ಕೃತ ದಿನದ ಪ್ರಯುಕ್ತ 'ರಾಜಸೂಯ–2023' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳ ಇದರ ಸಹ ಸಂಸ್ಥಾಪಕರು ಮತ್ತು ಕ್ರಿಯೇಟಿವ್ ಪದವಿಪೂರ್ವ ಕಾಲೇಜು ಕಾರ್ಕಳ ಇದರ ಪ್ರಾಂಶುಪಾಲರಾಗಿರುವ ವಿದ್ವಾನ್ ಗಣಪತಿ ಭಟ್ ಅವರು ಮಾತನಾಡುತ್ತಾ ಆಧುನಿಕ ಜಗತ್ತಿನಲ್ಲಿ ವೇದಾಧ್ಯಯನದ ಅನಿವಾರ್ಯತೆಯನ್ನು ತಿಳಿಹೇಳಿದರು. ಸಂಸ್ಕೃತಾಭ್ಯಾಸದಿಂದ ಸಂಸ್ಕೃತಿಯ ಪುನರುತ್ಥಾನ ಸಾಧ್ಯ ಎಂದು ಅಭಿಪ್ರಾಯ ಪಟ್ಟ ಅವರು ಸಂಸ್ಕೃತ ದಿನದ ಮಹತ್ವವನ್ನು ವಿವರಿಸುತ್ತಾ ಪ್ರಾಚೀನ ಭಾರತದ ಸಾಹಿತ್ಯ ಮತ್ತು ವಿಜ್ಞಾನಗಳ ಕುರಿತು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ವಿವರಿಸಿದರು. ಅತಿಥಿಗಳಾಗಿ ಆಗಮಿಸಿದ ಅರ್ಥಶಾಸ್ತ್ರ ಉಪನ್ಯಾಸಕರಾದ ಮಹೇಶ್ ಕೆ.ಎನ್. ಅವರು ದೈನಂದಿನ ಜೀವನದಲ್ಲಿ ಸಂಸ್ಕೃತವನ್ನು ಅಳವಡಿಸುವಂತೆ ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಸಂಸ್ಕೃತದಲ್ಲಿ ವಿಜ್ಞಾನ ಎಂಬ ವಿಷಯದ ಕುರಿತು ಚರ್ಚಾಗೋಷ್ಠಿ ನಡೆಯಿತು. ಕಳೆದಬಾರಿಯ ಪ್ರಥಮ ಪಿ.ಯು.ಸಿ ವಾರ್ಷಿಕ ಸಂಸ್ಕೃತ ಪರೀಕ್ಷೆಯಲ್ಲಿ 100 ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು ಮತ್ತು ವಿಶ್ವ ಸಂಸ್ಕೃತ ದಿನದ ಅಂಗವಾಗಿ ನಡೆದ ಸಾಂಸ್ಕೃತಿಕ ಸ್ಪರ್ಧೆಯ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ವೇದಿಕೆಯಲ್ಲಿ ಹೆಚ್.ಕೆ.ಎಸ್ ಪಿ ಯು ಕಾಲೇಜ್ ಹಾಸನ ಇಲ್ಲಿನ ಉಪಪ್ರಾಂಶುಪಾಲರುಗಳಾದ ಶ್ರೀ ಪ್ರವೀಣ್ ಎ. ಮತ್ತು ಆದಿತ್ಯ ವಟಿ. ಕೆ ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮವನ್ನು ಸಂಸ್ಕೃತ ಉಪನ್ಯಾಸಕರಾದ ಶ್ರೀ ರಾಘವೇಂದ್ರ ಗಾಂವ್ಕರ್ ನಿರೂಪಿಸಿದರು.

## ಕಾರ್ಕಳ ಕ್ರಿಯೇಟಿವ್ ವಿದ್ಯಾರ್ಥಿನಿಯರಿಗೆ ಸ್ವರಕ್ಷಣಾ ತರಬೇತಿ



**ಕಾರ್ಕಳ:** ಸಮಾಜದಲ್ಲಿ ಘಟಿಸುತ್ತಿರುವ ಘಟನಾವಳಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಹಿಳೆಯರ ಮೇಲೆ ಅನೇಕ ದೌರ್ಜನ್ಯಗಳು ಅತ್ಯಾಚಾರದಂತಹ ಹೇಯ ಕೃತ್ಯಗಳು ನಡೆಯುತ್ತಿವೆ. ದುರ್ಬಲತೆಯ ವಿರುದ್ಧ ಸಶಕ್ತವಾಗಿ ಎದುರಿಸಿ ನಿಲ್ಲಲು ಮಹಿಳೆಯರ ಸ್ವರಕ್ಷಣೆ ಕಲೆಯನ್ನು ಕಲಿಯಬೇಕಾದದ್ದು ಅನಿವಾರ್ಯವಾಗಿದೆ ಎಂದು ಸ್ವರಕ್ಷಣಾ ಕಲೆಯ ತರಬೇತುದಾರ ಕಾರ್ತಿಕ್ ಕಟೀಲ್ ಅವರು ವಿದ್ಯಾರ್ಥಿನಿಯರಿಗೆ ತಿಳಿಹೇಳಿದರು. ಕ್ರಿಯೇಟಿವ್ ಪದವಿ ಪೂರ್ವ ಕಾಲೇಜು ಕಾರ್ಕಳದಲ್ಲಿ ನಡೆದ ಕಾರ್ಯಾಗಾರದಲ್ಲಿ ತರಬೇತುದಾರರಾಗಿ ಪಾಲ್ಗೊಂಡು ಮಾತನಾಡಿದರು. ತಮ್ಮ ಮಾತೃಶ್ರೀ ಶೋಭಲತಾ ಸುರೇಶ್‌ರವರೊಂದಿಗೆ ಸ್ವರಕ್ಷಣೆಯ ಪ್ರಾತ್ಯಕ್ಷಿತೆಯನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಉಪನ್ಯಾಸಕಿಯರಾದ ನಿಧಿ ಬಿ ಶೆಟ್ಟಿ, ಶ್ರೀನಿಧಿ ನಾಯಕ್, ಆಡಳಿತಾಧಿಕಾರಿ ಜಯಪ್ರಕಾಶ್ ಶೆಟ್ಟಿ, ವಸತಿ ನಿಲಯ ಪಾಲಕರು ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕಿ ಪ್ರಿಯಾಂಕ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಪೋಕ್ಸೋ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮ



**ಉಡುಪಿ:** ರಸಾಯನ ಶಾಸ್ತ್ರ ವಿಭಾಗದ ಉಪನ್ಯಾಸಕಿ ಶಿಲ್ಪ ಇವರು ಪೋಕ್ಸೋ ಕಾಯಿದೆ ಮತ್ತು ವಿದ್ಯಾರ್ಥಿಗಳಿಗೆ ಸಮಾಜದಲ್ಲಿ ಆಗುತ್ತಿರುವ ದೌರ್ಜನ್ಯದ ಕುರಿತು ವಿಶೇಷವಾದ ಕಾರ್ಯಗಾರ ನಡೆಸಿ ಕೊಟ್ಟರು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಸ್ಟ್ಯಾನಿ ಲೋಬೊರವರು, ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು.

## ಹಿರ್ಗಾನ ಬೆಂಗಾಲ್ ಕೃಷಿ ಭೂಮಿಯಲ್ಲಿ ಕ್ರಿಯೇಟಿವ್ ಕಾಲೇಜಿನ ವಾಣಿಜ್ಯ ವಿದ್ಯಾರ್ಥಿಗಳಿಂದ ಭತ್ತದ ನಾಟಿ ಚಟುವಟಿಕೆ



**ಕಾರ್ಕಳ:** ವಿದ್ಯಾರ್ಥಿಗಳಿಗೆ ಕೃಷಿಯ ಕುರಿತು ಆಸಕ್ತಿ ಬೆಳೆಸುವ ಮತ್ತು ಅನ್ನದಾತನ ಕಷ್ಟವನ್ನು ಅರಿಯುವ ಕಾರ್ಯಕ್ರಮದ ಅಂಗವಾಗಿ ಕ್ರಿಯೇಟಿವ್ ಕಾಲೇಜ್‌ನ ವಾಣಿಜ್ಯ ವಿದ್ಯಾರ್ಥಿಗಳಿಗೆ ಭತ್ತದ ನಾಟಿ ನೆಡುವ ಕಾರ್ಯಕ್ರಮ ಹಿರ್ಗಾನದ ಬೆಂಗಾಲ್‌ನ ಕೃಷಿ ಭೂಮಿಯಲ್ಲಿ ನಡೆಯಿತು. ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕವಾಗಿ ನೇಜಿ ನೆಡುವ ವಿಧಾನವನ್ನು ತಿಳಿಸಲಾಯಿತು. ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಂಡು ಮಾತನಾಡಿದ ಕ್ರಿಯೇಟಿವ್‌ನ ಸಂಸ್ಥಾಪಕರಾದ ಡಾ. ಗಣನಾಥ ಶೆಟ್ಟಿಯವರು ಇಂದಿನ ಕಾಲಘಟ್ಟದಲ್ಲಿ ಕೃಷಿ ಚಟುವಟಿಕೆಗಳು ಕಡಿಮೆಯಾಗುತ್ತಿವೆ. ಅನ್ನವನ್ನು ಗಳಿಸಬೇಕಾದರೆ ಅದರ ಹಿಂದೆ ಅಪಾರ ಪರಿಶ್ರಮವಿದೆ. ನಾವೆಲ್ಲರೂ ರೈತರ ಕಷ್ಟವನ್ನು, ಒಕ್ಕಲುತನದ ಆನಂದವನ್ನು ಪಡೆಯಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದ ಸಂಯೋಜಕರಾದ ಅರ್ಥಶಾಸ್ತ್ರ ಉಪನ್ಯಾಸಕ ಉಮೇಶ್ ಅವರು ಮಾತನಾಡುತ್ತಾ ಹಿಂದಿನ ಕೃಷಿ ಜೀವನ ಹಾಗೂ ಇಂದಿನ ಒತ್ತಡದ ಬದುಕಿನಲ್ಲಿ ಕೃಷಿ ಚಟುವಟಿಕೆಗಳೇ ಮನಸ್ಸಿಗೆ ಸಂತೋಷ ನೀಡುತ್ತವೆ. ಆತ್ಮ ಸಂತೋಷಕ್ಕಾಗಿಯಾದರೂ ನಾವು ರೈತಾಪಿ ಕಸುಬನ್ನು ರೂಢಿಸಿಕೊಳ್ಳಬೇಕಾಗಿದೆ ಎಂದು ನುಡಿದರು.

## ಹೆಚ್.ಕೆ.ಎಸ್. ಕಾಲೇಜಿನಲ್ಲಿ ಕಾನೂನು ಅರಿವು ಕಾರ್ಯಕ್ರಮ



**ಹಾಸನ:** ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಬಿ.ಕೆ.ರವಿಕಾಂತ್ ಇವರು ಪೋಕ್ಸೋ ಕಾಯ್ದೆಯ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು.

ಅತಿಥಿಯಾಗಿ ಆಗಮಿಸಿದ ಹಿರಿಯ ವಕೀಲರಾದ ಶ್ರೀಮತಿ ಗಿರಿಜಾಂಬ ಇವರು 'ಮಾನವ ಕಳ್ಳ ಸಾಗಾಣಿಕೆ ತಡೆ' ಹಾಗೂ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ಕಾವ್ಯೋಕ್ತಿ | ಹೆಣ್ಣು ಹೆಣ್ಣಿಗೂ ಹಕ್ಕಿದೆ ಹುಟ್ಟಲಿಕ್ಕೆ, ಹೆಣ್ಣು ಹೆಣ್ಣಿಗೂ ಹಕ್ಕಿದೆ ಬಾಳಲಿಕ್ಕೆ
– ಡಾ. ದೊಡ್ಡರಂಗೇಗೌಡ




AMR
SPORTS WEARS
Manufacturing Unit
NAME
10
ಎಲ್ಲಾ ರೀತಿಯ ಕ್ರೀಡಾ ಸಮವಸ್ತ್ರಗಳನ್ನು
ರಿಯಾಯಿತಿ ದರದಲ್ಲಿ ಕ್ಲಪ್ತ ಸಮಯದಲ್ಲಿ ಮಾಡಿಕೊಡಲಾಗುವುದು.
1st floor, Swagath Building, Near Aruna Theatre,
Main Road Puttur Dakshina Kannada, Karnataka.
Contact For : 93435 70987


ಕ್ರಿಯೇಟಿವ್
ಪುಸ್ತಕ ಮನೆ
ಜೋಡುರಸ್ತೆ, ಕಾರ್ಕಳ
Book House
Kids' Zone
Gifts & Toys
Stationery
Coffee Club
Readers' Club
School Kits
Office Supplies
WHOLESALE | RETAIL | ONLINE
+91 96064 74289
www.pustakamane.com


happyB®
Manipal | Shimoga | Bengaluru
Vision
"To be a valuable enterprise in the business of being. Our vision is that of shared happiness & prosperity for everyone associated with the enterprise including clientele, employees and shareholders."
Mission
"To realize the vision by winning a happy clientele through excellent products & services delivered by genuine effort and innovation."
happyB Attire Pvt. Ltd.
Uniforms | Books | Academic Solutions
#29, LLR ROAD, SHIVAMOGGA - 577201 – CIN : U18204KA2012PTC066295 – GSTIN : 29AADCH0570J1ZI
Contact: 990 200 7000, 810 510 1936, 9880 291 291 | happyb.uniforms@gmail.com



